ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಫೆಬ್ರವರಿ 16, 2021

ಸಂಪುಟ : 47 ಸಂಚಿಕೆ : 288 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

# ದಿಶಾ ರವಿ, ನಿಕಿತಾ, ಶಂತನು ಸೇರಿ ರಚಿಸಿದ ಟೂಲ್‌ಕಿಟ್


ದಿಶಾ ರವಿ ನಿಕಿತಾ ಜೆಕೊಬ್

**ಟೂಲ್‌ಕಿಟ್ ಹಿಂದೆ ಖಲಿಸ್ತಾನ ಪರ ಸಂಘಟನೆಯ ಕೈವಾಡ. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐ.ಎಸ್.ಐ. ಪರ ವ್ಯಕ್ತಿಯ ಸಂಪರ್ಕದ ಬಗ್ಗೆ ತನಿಖೆ**

ನವದೆಹಲಿ, ಫೆ. 15 - ಪರಿಸರ ಕಾರ್ಯಕರ್ತೆ ದಿಶಾ ರವಿ ಹಾಗೂ ಮುಂಬೈ ವಕೀಲೆ ನಿಕಿತಾ ಜಕೊಬ್ ಹಾಗೂ ಪುಣೆಯ ಇಂಜಿನಿಯರ್ ಶಂತನು ಅವರು ರೈತರ ಪ್ರತಿಭಟನೆ ಕುರಿತ 'ಟೂಲ್‌ಕಿಟ್' ರೂಪಿಸಿದ್ದರು ಹಾಗೂ ದೇಶದ ತೇಜೋವಧೆಗೆ ಇತರರ ಜೊತೆ ಹಂಚಿಕೊಂಡಿದ್ದರು ಎಂದು ದೆಹಲಿ ಪೊಲೀಸರು ತಿಳಿಸಿದ್ದಾರೆ.

ಶನಿವಾರ ಬೆಂಗಳೂರಿನಲ್ಲಿ ಬಂಧಿತ ದಿಶಾ ರವಿ ಟೂಲ್‌ಕಿಟ್ ಅನ್ನು ಪರಿಸರ ಕಾರ್ಯಕರ್ತೆ ಗ್ರೆಟಾ ಥನ್‌ಬರ್ಗ್‌ಗೆ ಟೆಲಿಗ್ರಾಮ್ ಆಪ್ ಮೂಲಕ ಕಳಿಸಿದ್ದರು ಹಾಗೂ ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಟೂಲ್‌ಕಿಟ್ ಕುರಿತ ಹಲವಾರು ಮಾಹಿತಿಯನ್ನು ದಿಶಾ ಅಳಿಸಿರುವುದು ಟೆಲಿಗ್ರಾಂ ಅಕೌಂಟ್‌ನಿಂದ ತಿಳಿದು ಬಂದಿದೆ ಎಂದವರು ಹೇಳಿದ್ದಾರೆ.


ಟೂಲ್‌ಕಿಟ್ ರೂಪಿಸಿದ ಆರೋಪದ ಮೇಲೆ ನಿಕಿತಾ ಹಾಗೂ ಶಂತನು ವಿರುದ್ಧ ಜಾಮೀನು ರಹಿತ ವಾರಂಟ್ ಹೊರಡಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಜಂಟಿ ಪೊಲೀಸ್ ಆಯುಕ್ತ (ಸೈಬರ್) ಪ್ರೇಮ ನಾಥ, 22 ವರ್ಷದ ದಿಶಾ ಟೂಲ್‌ಕಿಟ್‌ಗಾಗಿ ರೂಪಿಸಿದ್ದ ವಾಟ್ಸ್‌ಅಪ್ ಗ್ರೂಪ್ ಅನ್ನು ಅಳಿಸಲಾಗಿದೆ. ಈ ಟೂಲ್‌ಕಿಟ್ ಗೂಗಲ್ ಡಾಕ್ಸ್ ಜೊತೆಗಿನ ಹೈಪರ್‌ಲಿಂಕ್ ಹೊಂದಿತ್ತು. ಈ ಲಿಂಕ್‌ಗಳಲ್ಲಿ ಬಹಳಷ್ಟು ಖಲಿಸ್ತಾನ ಪರವಾಗಿವೆ ಎಂದು ತಿಳಿಸಿದ್ದಾರೆ.

ದೇಶದ ತೇಜೋವಧೆಗಾಗಿ ಟೂಲ್‌ಕಿಟ್ ರೂಪಿಸಲಾಗಿತ್ತು ಎಂದವರು ಹೇಳಿದ್ದಾರೆ. ಈ ತಿಂಗಳ ಆರಂಭದಲ್ಲಿ ಟೂಲ್‌ಕಿಟ್ ವಿರುದ್ಧ ದೆಹಲಿ (2ನೇ ಪುಟಕ್ಕೆ)

# ಭೂಪಟ ಖಾಸಗಿಗೆ ಮುಕ್ತ

## ಜಿಯೋಸ್ಪೇಷಿಯಲ್ ಮಾಹಿತಿ ಉದಾರೀಕರಣಗೊಳಿಸಿದ ಕೇಂದ್ರ



**ಜಿಯೋಸ್ಪೇಷಿಯಲ್ ಮಾಹಿತಿ ಉದಾರೀಕರಣವು ಆತ್ಮನಿರ್ಭರ್ ಭಾರತದ ಕಡೆಗೆ ಬೃಹತ್ ಹೆಜ್ಜೆ. ಇದರಿಂದ ದೇಶದ ರೈತರು, ನವೋದ್ಯಮ, ಖಾಸಗಿ ವಲಯ, ಸಾರ್ವಜನಿಕ ವಲಯ, ಸಂಶೋಧನಾ ಸಂಸ್ಥೆಗಳು ಅನ್ವೇಷಣೆ ನಡೆಸಲು ನೆರವಾಗಲಿದೆ ಎಂದಿದ್ದಾರೆ.**

ನವದೆಹಲಿ, ಫೆ. 15 - ದೇಶದ ಭೂಪಟ ನೀತಿಯಲ್ಲಿ ವ್ಯಾಪಕ ಬದಲಾವಣೆ ತಂದಿರುವ ಕೇಂದ್ರ ಸರ್ಕಾರ, ಭೂಪಟಕ್ಕೆ ಬಳಸಲಾಗುವ ಜಿಯೋಸ್ಪೇಷಿಯಲ್ ಮಾಹಿತಿ ಸಂಗ್ರಹಿಸುವುದು ಹಾಗೂ ಉತ್ಪಾದಿಸುವುದರ ನಿಯಮಗಳನ್ನು ಉದಾರೀಕರಣಗೊಳಿಸಿದೆ. ಇದರಿಂದಾಗಿ ಈ ವಲಯದಲ್ಲಿ ಅನ್ವೇಷಣೆಗೆ ಪ್ರೋತ್ಸಾಹ ಸಿಗುವ ಜೊತೆಗೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಸಮಾನ ಅವಕಾಶ ಪಡೆಯಲಿವೆ.

ನೂತನ ನಿಯಮಗಳ ಅನ್ವಯ ಈ ವಲಯವನ್ನು ಉದಾರೀಕರಣಗೊಳಿಸಲಾಗುವುದು ಹಾಗೂ ಸರ್ವೇ, ಭೂಪಟ ರಚನೆ ಮತ್ತು ಇವುಗಳನ್ನು ಆಧರಿಸಿ ಸಾಧನಗಳನ್ನು ರೂಪಿಸುವುದಕ್ಕೆ ಪೂರ್ವಾನುಮತಿ ಪಡೆಯಬೇಕಿಲ್ಲ ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಅಶುತೋಶ್ ಶರ್ಮ ತಿಳಿಸಿದ್ದಾರೆ.

ಭಾರತೀಯ ಸಂಸ್ಥೆಗಳನ್ನು ಸಂಪೂರ್ಣ ನಿಯಂತ್ರಣ ಮುಕ್ತಗೊಳಿಸಲಾಗಿದೆ. ಜಿಯೋಸ್ಪೇಷಿಯಲ್ ಮಾಹಿತಿ ಹಾಗೂ ಭೂಪಟ ಸೇರಿದಂತೆ ಜಿಯೋಸ್ಪೇಷಿಯಲ್ ಡಾಟಾ ಸೇವೆಗಳಿಗಾಗಿ ಯಾವುದೇ ಪೂರ್ವಾನುಮತಿ ಇಲ್ಲವೇ ರಕ್ಷಣಾ ಅನುಮತಿಗಳನ್ನು ಪಡೆಯಬೇಕಿಲ್ಲ ಎಂದು ಶರ್ಮ ಹೇಳಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಸರ್ಕಾರದ ಕ್ರಮದಿಂದಾಗಿ ರೈತರಿಗೂ ಹೆಚ್ಚು ಲಾಭವಾಗಲಿದೆ. ಕೃಷಿ ಹಾಗೂ ಸಂಬಂಧಿಸಿದ ವಲಯಗಳಿಗೆ ಹೊಸ ತಂತ್ರಜ್ಞಾನ ಹಾಗೂ ವೇದಿಕೆಗಳು ಸಿಗಲಿವೆ ಎಂದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಹರ್ಷ ವರ್ಧನ್, ಉನ್ನತ ಗುಣಮಟ್ಟದ ಭೂಪಟಗಳಿರದೇ ಬಳಲುತ್ತಿದ್ದ ವಲಯಗಳಿಗೆ ಸರ್ಕಾರದ ಕ್ರಮ ನೆರವಾಗಲಿದೆ ಎಂದಿದ್ದಾರೆ.

ಹಿಂದಿನ ನಿಯಮಗಳ ಕಾರಣದಿಂದ ಭೂಪಟ ರಚಿಸುವ ಹೊಣೆ ಹೊತ್ತಿದ್ದ ಸರ್ವೇ ಆಫ್ ಇಂಡಿಯಾ ಸಹ ತೊಡಕುಗಳನ್ನು ಎದುರಿಸುತ್ತಿತ್ತು. ಹಲವಾರು ಸಂಸ್ಥೆಗಳಿಂದ ಅನುಮತಿ ಪಡೆಯುವಷ್ಟರಲ್ಲಿ ಮೂರರಿಂದ ಆರು ತಿಂಗಳು ವಿಳಂಬವಾಗುತ್ತಿತ್ತು ಎಂದು ವರ್ಧನ್ ತಿಳಿಸಿದ್ದಾರೆ.

ಔದ್ಯಮಿಕ ವಲಯ ಸಹ ಸರ್ಕಾರದ ಕ್ರಮ ಸ್ವಾಗತಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಎಸ್ರಿ ಇಂಡಿಯಾ ಟೆಕ್ನಾಲಜೀಸ್‌ನ ಅಜೇಂದ್ರ ಕುಮಾರ್, ಭೂಗೋಳಿಕ ಮಾಹಿತಿ ವ್ಯವಸ್ಥೆಯ ಮೂಲಕ ಕೃಷಿ, ಗಣಿಗಾರಿಕೆ, ಜಲ, ನಗರ ಸೌಲಭ್ಯ, ಸಾರ್ವಜನಿಕ ಸುರಕ್ಷತೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ನೆರವಾಗಲಿದೆ ಎಂದಿದ್ದಾರೆ.

## ಸಿರಿಗೆರೆ ಶ್ರೀಗಳಿಗೆ 'ಆದಿಕವಿ' ಡಾ. ಶಂಕರ್‌ಗೆ 'ವಾಗ್ದೇವಿ' ಪ್ರಶಸ್ತಿ



ಚಿತ್ರದುರ್ಗ, ಫೆ. 15- ತಾಲ್ಲೂಕಿನ ಸಿರಿಗೆರೆ ತರಳಬಾಳು ಬೃಹನ್ಮಠದ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಆದಿಕವಿ, ಬೆಂಗಳೂರಿನ ಸಂಸ್ಕೃತ ವಿದ್ವಾಂಸ ಡಾ. ಶಂಕರ ರಾಜಾರಾಮನ್ ಅವರನ್ನು ವಾಗ್ದೇವಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ರಘುನಂದನ್ ಭಟ್ ತಿಳಿಸಿದರು.

ಪರಿಷತ್‌ನಿಂದ ಸಮಾಜದಲ್ಲಿ ಗಣನೀಯ ಸಾಧನೆ ಮಾಡಿದ ಹಿರಿಯರಿಗೆ ಪ್ರಶಸ್ತಿ ನೀಡುತ್ತಾ ಬರಲಾಗಿದೆ. ಧಾರ್ಮಿಕ, ಸಾಹಿತ್ಯ ಸೇರಿ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಕಾರಣಕ್ಕೆ ಶ್ರೀಗಳನ್ನು ದೇಶ, ವಿದೇಶಗಳಲ್ಲೂ ಛಾಪು ಮೂಡಿಸಿರುವ ಉದ್ದೇಶಕ್ಕೆ ರಾಜಾರಾಮನ್‌ಗೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ರಘುನಂದನ್ ಭಟ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ತರಳಬಾಳು ಬೃಹನ್ಮಠದ (2ನೇ ಪುಟಕ್ಕೆ)

## ಖಾಸಗಿತನ ನಿಯಮ : ಕೇಂದ್ರ, ವಾಟ್ಸ್‌ಆಪ್‌ಗಳಿಗೆ ನೋಟಿಸ್

ನವದೆಹಲಿ, ಫೆ. 15 - ಯುರೋಪಿನ ಬಳಕೆದಾರರಿಗೆ ಹೋಲಿಸಿದರೆ ಭಾರತೀಯರ ಖಾಸಗಿತನದ ನಿಯಮಗಳನ್ನು ಕಳಪೆ ಮಾಡಿರುವ ಬಗ್ಗೆ ಕೇಂದ್ರ ಸರ್ಕಾರ ಹಾಗೂ ವಾಟ್ಸ್‌ಅಪ್‌ಗಳು ಉತ್ತರಿಸಬೇಕೆಂದು ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ಹೊಸ ನಿಯಮಗಳಿಂದ ತಮ್ಮ ಖಾಸಗಿತನ ಕಳೆದುಹೋಗಲಿದೆ ಎಂಬ ಗಂಭೀರ ಕಳವಳ ಜನರಿಗಿದೆ. ಇದನ್ನು ರಕ್ಷಿಸುವುದು ನಮ್ಮ ಕರ್ತವ್ಯ ಎಂದು ನ್ಯಾಯಾಲಯ ಹೇಳಿದೆ.

ನೀವು ಎರಡು ಇಲ್ಲವೇ ಮೂರು ಟ್ರಿಲಿಯನ್ (ಡಾಲರ್) ಕಂಪನಿಯಾಗಿರಬಹುದು. ಆದರೆ, ಜನರು ಹಣಕ್ಕಿಂತ ಖಾಸಗಿತನಕ್ಕೆ ಹೆಚ್ಚು ಬೆಲೆ (2ನೇ ಪುಟಕ್ಕೆ)

# ಬಿಪಿಎಲ್ : ಹಿಂದಿನ ಆದೇಶವೇ ಅಂತಿಮ

## ದ್ವಿಚಕ್ರ ವಾಹನ, ಫ್ರಿಡ್ಜ್, ಟಿವಿ ಹೊಂದಿರುವವರಿಗೆ ಬಿಪಿಎಲ್ ಕಾರ್ಡ್ ರದ್ದು ಎಂಬ ನಿಯಮಕ್ಕೆ ತೆರೆ ಎಳೆದ ಉಮೇಶ್ ಕತ್ತಿ



ಬೆಂಗಳೂರು, ಫೆ. 15 - ಸರ್ಕಾರದ ನಿಯಮಾವಳಿಗಳನ್ನು ಉಲ್ಲಂಘಿಸಿ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದರೆ ಅಂತಹವರು ಮಾರ್ಚ್ 31ರೊಳಗೆ ಇಲಾಖೆಗೆ ಕಾರ್ಡ್‌ಗಳನ್ನು ಹಿಂತಿರುಗಿಸುವಂತೆ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಉಮೇಶ್ ಕತ್ತಿ ಎಚ್ಚರಿಸಿದ್ದಾರೆ.

ಒಂದು ವೇಳೆ ನಿಗದಿತ ಸಮಯದಲ್ಲಿ ಅನರ್ಹರು ಪಡಿತರ ಚೀಟಿಗಳನ್ನು ಹಿಂದಿರುಗಿಸದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ದ್ವಿಚಕ್ರ ವಾಹನ, ಫ್ರಿಡ್ಜ್, ಟಿವಿ ಹೊಂದಿರುವವರು ಬಿಪಿಎಲ್ ಕಾರ್ಡ್ ಹೊಂದಿದ್ದರೆ ಅಂತಹವರ ಬಿಪಿಎಲ್ ಚೀಟಿಗಳನ್ನು ರದ್ದುಗೊಳಿಸುವುದಾಗಿ ನಿನ್ನೆ ಹೇಳಿಕೆ ನೀಡಿದ್ದ ಸಚಿವರು, ಇಂದು ತಮ್ಮ ನಿಲುವು ಬದಲಾಯಿಸಿ, ಹಿಂದಿನ ಸರ್ಕಾರಿ ಆದೇಶಗಳಲ್ಲಿ ಬದಲಾವಣೆ ಇಲ್ಲ ಎಂದಿದ್ದಾರೆ.

ಈ ಸಂಬಂಧ ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಅವರು, ತಮ್ಮ ಹೇಳಿಕೆಯನ್ನು ಮಾಧ್ಯಮಗಳು ತಿರುಚಿವೆ, ಅನರ್ಹರು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ, ಅಂತಹವರಿಂದ ಬಿಪಿಎಲ್ ಪಡಿತರ ಚೀಟಿ ಹಿಂಪಡೆಯಲು ಕ್ರಮ ಕೈಗೊಳ್ಳಲಾಗುವುದು.

ಅನರ್ಹ ಬಿಪಿಎಲ್ ಚೀಟಿ ಹಿಂತಿರುಗಿಸಲು 45 ದಿನಗಳ ಗಡುವು ನೀಡಲಾಗಿದೆ, ಅಷ್ಟರೊಳಗೆ ಇಲಾಖೆ ಅಥವಾ ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಿಗೆ ಹಿಂದಿರುಗಿಸಿ ಸ್ವೀಕೃತಿ ಪತ್ರ ಪಡೆಯಬೇಕು ಎಂದು ಸಚಿವರು ಸೂಚಿಸಿದ್ದಾರೆ.

ಪತ್ರಿಕಾ ಹೇಳಿಕೆ ಜೊತೆ 2012, 2015 ಮತ್ತು 2017ನೇ ಸಾಲಿನಲ್ಲಿ ಹೊರಡಿಸಿರುವ ಆದೇಶಗಳಂತೆ ಸರ್ಕಾರಿ ಇಲ್ಲವೇ ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ, ವಾರ್ಷಿಕ ಆದಾಯ 1.20 ಲಕ್ಷ ರೂ. ಮೀರಿದ ಹಾಗೂ ಮಾಸಿಕ 150 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಕೆದಾರರು ಬಿಪಿಎಲ್ ಕಾರ್ಡ್ ಪಡೆಯುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಮೂರು ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು, ನಗರ ಪ್ರದೇಶದಲ್ಲಿ ಒಂದು ಸಾವಿರ ಚದರ ಅಡಿ ವಿಸ್ತೀರ್ಣದ ಪಕ್ಕಾ ಮನೆ ಹೊಂದಿರುವವರಿಗೆ ಬಿಪಿಎಲ್ ಪಡಿತರ ಚೀಟಿ ಹೊಂದುವ ಅರ್ಹತೆ ಇರುವುದಿಲ್ಲ.

ಜೀವನೋಪಾಯಕ್ಕೆ (5ನೇ ಪುಟಕ್ಕೆ)

# ಮೈಲಾರ ಜಾತ್ರೆ: ಹೊರಗಿನ ಭಕ್ತರಿಗೆ ನಿರ್ಬಂಧ

**ಡಿಸಿ ಪವನ ಮಾಲಪಾಟಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ**

ಬಳ್ಳಾರಿ, ಫೆ.15 - ಹೂವಿನಹಡಗಲಿ ತಾಲ್ಲೂಕಿನ ಮೈಲಾರಲಿಂಗೇಶ್ವರ ಸ್ವಾಮಿಯ ವಾರ್ಷಿಕ ಕಾರಣಿಕೋತ್ಸವಕ್ಕೆ ಮೈಲಾರ ಗ್ರಾಮಸ್ಥರನ್ನು ಹೊರತುಪಡಿಸಿ ಹೊರಗಿನ ಭಕ್ತರಿಗೆ ಪ್ರವೇಶ ನಿರ್ಬಂಧ ವಿಧಿಸಲಾಗಿದೆ.

ಇದೇ ಫೆ.19ರಿಂದ ಮಾ.2ರವರೆಗೆ ನಡೆಯಲಿರುವ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವ ಮತ್ತು ಕಾರಣಿಕೋತ್ಸವವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊರಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಆಚರಿಸಲು ಜಿಲ್ಲಾಧಿಕಾರಿ ಪವನಕುಮಾರ್ ಮಾಲಪಾಟಿ ಸೂಚಿಸಿದ್ದಾರೆ. ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕಾರಣಿಕೋತ್ಸವದಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಸಂಪೂರ್ಣ ನಿಷೇಧಿಸಲಾಗಿದೆ. ಕಾರಣಿಕೋತ್ಸವಕ್ಕೆ ಫೆ.19ರಿಂದ ಮಾ.2ರವರೆಗೆ ಅಗತ್ಯ ಪೊಲೀಸ್ ಭದ್ರತಾ ವ್ಯವಸ್ಥೆ ಹಾಗೂ ಬ್ಯಾರಿಕೆಡ್ ಸೇರಿದಂತೆ ಇನ್ನಿತರೆ ಭದ್ರತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಮಾಲಪಾಟಿ ಹೇಳಿದ್ದಾರೆ.

ಯಾವುದೇ ಕಾರಣಕ್ಕೂ ಜನರು ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ವಾಹನಗಳ ಮೂಲಕ ಮೈಲಾರ ಪ್ರವೇಶಿಸದಂತೆ ಕ್ರಮ ಕೈಗೊಳ್ಳಬೇಕು. ಈ ಕುರಿತು ಹಡಗಲಿ, ಹರಪನಳ್ಳಿ ಹಾಗೂ ಹಾವೇರಿ, ದಾವಣಗೆರೆ, ಗದಗ ಜಿಲ್ಲೆಗಳಲ್ಲಿಯೂ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಡಿಸಿ ಮಾಲಪಾಟಿ ಸೂಚಿಸಿದರು.

ಮೈಲಾರ ಜಾತ್ರೆಗೆ ಸಂಬಂಧಿಸಿದಂತೆ ಈ ಮುಂಚೆ ಪ್ರತಿ ವರ್ಷ ಯಾವ (2ನೇ ಪುಟಕ್ಕೆ)

## ಸಿಎಂ ವಿರುದ್ಧ ಮತ್ತೆ ಹರಿಹಾಯ್ದ ಯತ್ನಾಳ್



ಬೆಂಗಳೂರು, ಫೆ.15 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕುಟುಂಬ ಖಾಸಗಿ ವಿಮಾನದಲ್ಲಿ ಮಾರಿಷಸ್‌ಗೆ ಹೋಗಿದ್ದಾದರೂ ಏತಕ್ಕೆ, ಅಲ್ಲಿ ಹಣ ಹೂಡಲು ಹೋಗಿದ್ದರೆ? ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಶ್ನಿಸಿದ್ದಾರೆ.

ಯಡಿಯೂರಪ್ಪ ವಿರುದ್ಧ ಹೇಳಿಕೆ ನೀಡಿದ್ದಕ್ಕೆ ಬಿಜೆಪಿ ವರಿಷ್ಠರು ಶೋಕಾಸ್ ನೋಟೀಸ್ ಜಾರಿ ಮಾಡಿದ್ದರೂ ಅದನ್ನು ಕ್ಯಾರೆ ಎನ್ನದ ಯತ್ನಾಳ್, ಮುಖ್ಯಮಂತ್ರಿ ವಿರುದ್ಧ ಇಂದೂ ಹರಿಹಾಯ್ದಿದ್ದಾರೆ.

ಯಡಿಯೂರಪ್ಪ ಕುಟುಂಬದವರು ಆಡಳಿತದಲ್ಲಿ ಹಸ್ತಕ್ಷೇಪ ಮಾಡಿ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಿದ್ದಾರೆ ಎಂಬ ಆರೋಪಗಳ ಮಧ್ಯೆಯೇ, ಇವರ (2ನೇ ಪುಟಕ್ಕೆ)

## ಕೃಷಿ ಇಲಾಖೆಗೆ ನಟ ದರ್ಶನ್ ರಾಯಭಾರಿ



ಬೆಂಗಳೂರು, ಫೆ.15 - ರೈತರ ಹಿತ ಕ್ಕಾಗಿ ರಾಜ್ಯ ಕೃಷಿ ಇಲಾಖೆ ಕೈಗೊಂಡಿರುವ ಕಾರ್ಯಕ್ರಮಗಳನ್ನು ಪ್ರಚುರಪಡಿಸಲು ಹಾಗೂ ಕೃಷಿಕರಲ್ಲಿ ಸ್ಫೂರ್ತಿ ತುಂಬಲು ಚಿತ್ರನಟ ದರ್ಶನ್ ಅವರನ್ನು ಕೃಷಿ ಇಲಾಖೆಯ ಪ್ರಚಾರ ರಾಯಭಾರಿ (5ನೇ ಪುಟಕ್ಕೆ)

**ಪುಣ್ಯಸ್ಮರಣೆ**



**ಲಿಂ|| ಎಂ.ಜಿ. ಬಕ್ಕೇಶ್**
ಮಾಜಿ ಮೇಯರ್, ಮಹಾನಗರ ಪಾಲಿಕೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು.
ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು,
ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಸಹೋದರರು: ಎಂ.ಜಿ. ರಾಜಣ್ಣ,
ಎಂ.ಜಿ. ಬಸವರಾಜ್, ಎಂ.ಜಿ. ಬಾಬಣ್ಣ
ಧರ್ಮಪತ್ನಿ : ಶ್ರೀಮತಿ ಎಂ.ಬಿ. ಅನಿತಾ ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.

ಉಮಾ ಟ್ರೇಡರ್ಸ್,
ದಾವಣಗೆರೆ, ಚಿತ್ರದುರ್ಗ.
ಉಮಾ ಟ್ರೇಡಿಂಗ್ ಕಂಪನಿ,
ಉಮಾ ಮಹೇಶ್ವರ ಇಂಡಸ್ಟ್ರೀಸ್
ಹರಿಹರ ರಸ್ತೆ, ದಾವಣಗೆರೆ.

# ಭತ್ತ ಬಿಟ್ಟು ಅಡಿಕೆಯತ್ತ ವಾಲಿದ ರೈತರು

## ದಾವಣಗೆರೆ ತಾಲ್ಲೂಕಿನಲ್ಲಿ 2 ಸಾವಿರ ಹೆಕ್ಟೇರ್ ಭತ್ತದ ಪ್ರದೇಶದಲ್ಲಿ ಅಡಿಕೆ



**ತಾ.ಪಂ. ಕೆಡಿಪಿ ಸಭೆಯಲ್ಲಿ ಸಹಾಯಕ ಕೃಷಿ ನಿರ್ದೇಶಕ ರೇವಣಸಿದ್ದನಗೌಡ**

ದಾವಣಗೆರೆ, ಫೆ.15- ಈ ಬಾರಿ ಅಡಿಕೆ ಬೆಳೆಯಲು ಹೆಚ್ಚಿನ ರೈತರು ಉತ್ಸುಕರಾಗಿರುವುದರಿಂದ ದಾವಣಗೆರೆ ತಾಲ್ಲೂಕೊಂದರಲ್ಲಿಯೇ ಸುಮಾರು 2 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬೆಳೆ ಕಡಿಮೆಯಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ರೇವಣಸಿದ್ದನಗೌಡ ತಿಳಿಸಿದರು.

ತಾಲ್ಲೂಕು ಪಂಚಾಯ್ತಿ ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಕಳೆದ ಒಂದೆರಡು ವರ್ಷಗಳಿಂದ ಭತ್ತದ ದರ ಕಡಿಮೆಯಾಗಿರುವುದರಿಂದ ದಾವಣಗೆರೆ ಕಸಬಾ, ಬೇತೂರು ಭಾಗಗಳಲ್ಲಿ ನೀರು ಸಮರ್ಪಕವಾಗಿ ಸಿಗುವ ಪ್ರದೇಶಗಳಲ್ಲಿ ರೈತರು ಅಡಿಕೆ ಬೆಳೆಯಲು ಮುಂದಾಗಿದ್ದಾರೆ. ಆದರೆ ಮುಂದಿನ ದಿನಗಳಲ್ಲಿ ಅಡಿಕೆ ದರ ಇಳಿಕೆಯಾದರೆ ರೈತರು ಆರ್ಥಿಕ ಸಂಕಷ್ಟ ಅನುಭವಿಸಬೇಕಾಗುತ್ತದೆ ಎಂದೂ ಸಹ ಎಚ್ಚರಿಸಿದರು.

ಅನೇಕ ಕಡೆ ಕಪ್ಪು ಭೂಮಿಯಲ್ಲಿ ಅಡಿಕೆ ಬೆಳೆಯಲು ರೈತರು ಮುಂದಾಗಿದ್ದಾರೆ. ಆದರೆ ಸೂಕ್ತ ತಜ್ಞರ ಸಲಹೆ ಪಡೆದು ವೈಜ್ಞಾನಿಕವಾಗಿ ಅಡಿಕೆ ನಿರ್ವಹಣೆ ಮಾಡಬೇಕು. ಇಲ್ಲದಿದ್ದರೆ ಇಳುವರಿ ಕಡಿಮೆಯಾಗಿ ನಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ಅಡಿಕೆ ಬೆಳೆಯುವ ರೈತರಿಗೆ ವಿಶೇಷ ತರಬೇತಿ ಅಗತ್ಯವಿದೆ ಎಂದು ಅಭಿಪ್ರಾಯಿಸಿದರು.

ಮೆಕ್ಕೆಜೋಳದ ಜೊತೆಗೆ ರೈತರು ಶೇ.50ರಷ್ಟು ಭಾಗದಲ್ಲಿ ರಾಗಿಯನ್ನೂ ಬೆಳೆಯಲು ಮುಂದಾಗಬೇಕು. ಸರ್ಕಾರ ಉತ್ತರ ಕರ್ನಾಟಕ ಭಾಗದಲ್ಲಿ ಪಡಿತರ ಜೊತೆ ರಾಗಿ ನೀಡುವುದಾಗಿ ಹೇಳಿದೆ. ಇದರಿಂದ ಬೆಲೆ ಕಡಿಮೆಯಾಗದು. ಜೊತೆಗೆ ರಾಗಿಯ ಹುಲ್ಲನ್ನು ದನ-ಕರುಗಳ ಮೇವಿಗೂ ಬಳಕೆ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಧರ್ಮಸ್ಥಳ ಸಂಸ್ಥೆ ಸಹಯೋಗದಲ್ಲಿ ಈ ಬಾರಿ ಶೇ.30ರಷ್ಟು ಯಾಂತ್ರೀಕೃತ ಭತ್ತದ ನಾಟಿ ಮಾಡಲಾಗಿದೆ. ಇಲಾಖೆಯಿಂದಲೂ ತರಬೇತಿ ನೀಡಲಾಗುತ್ತಿದೆ ಎಂದರು.

ಮುಂಗಾರು ಹಂಗಾಮಿನಲ್ಲಿ ಬೆಳೆದ ರಾಗಿಗೆ ಖರೀದಿ ಕೇಂದ್ರ ಆರಂಭಿಸಲಾಗಿದ್ದು 151 ರೈತರು 5295 (2ನೇ ಪುಟಕ್ಕೆ)

# ಬಿಜೆಪಿ ಎದುರಿಸಲು ಜಾತಿಗಳ ಸಮಾವೇಶಕ್ಕೆ ಅವಕಾಶ ಕೊಡಿ

**ಕಾಂಗ್ರೆಸ್ ವರಿಷ್ಠರಲ್ಲಿ ಸಿದ್ದರಾಮಯ್ಯ ಮನವಿ**

ಬೆಂಗಳೂರು, ಫೆ. 15 - ಮುಂಬರುವ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟು ಕೊಂಡು ಹಿಂದುಳಿದ ವರ್ಗಗಳ ಜಾತಿ ಸಮಾವೇಶ ನಡೆಸಲು ತಮಗೆ ಅನುವು ಮಾಡಿಕೊಡಬೇಕು ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಕಾಂಗ್ರೆಸ್ ವರಿಷ್ಠರಿಗೆ ಮನವಿ ಮಾಡಿಕೊಳ್ಳುತ್ತಿದ್ದಾರೆ.

ರಾಜ್ಯಾದ್ಯಂತ 'ಹಿಂದ' ಸಮಾವೇಶಗಳನ್ನು ಕೈಗೊಳ್ಳಲು ನಿರ್ಣಯ ಮಾಡುತ್ತಿದ್ದಂತೆ ಪಕ್ಷದಲ್ಲಿ ಇದರ ವಿರುದ್ಧ ಅಪಸ್ವರ ಕೇಳಿಬಂದ ಹಿನ್ನೆಲೆಯಲ್ಲಿ ತಮ್ಮ ಉದ್ದೇಶ ಮತ್ತು ನಿಲುವನ್ನು ವರಿಷ್ಠರಿಗೆ ತಿಳಿಸಿಲು ಅವರು ದೆಹಲಿಗೆ ಪ್ರಯಾಣಿಸಿದ್ದಾರೆ.

ನಾಳೆ ಸಂಜೆ ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ 'ಹಿಂದ' ಸಮಾವೇಶದ ಬಗ್ಗೆ ಮನವರಿಕೆ ಮಾಡಿಕೊಟ್ಟು ಒಪ್ಪಿಗೆ ಪಡೆಯಲು ಪ್ರಯತ್ನಿಸಲಿದ್ದಾರೆ. 'ಹಿಂದ' ಸಮಾವೇಶಕ್ಕೆ ಸಂಬಂಧಿಸಿದಂತೆ ಪಕ್ಷದ ಹಿರಿಯ ನಾಯಕ ಹಾಗೂ ರಾಜ್ಯಸಭೆಯಲ್ಲಿನ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ (2ನೇ ಪುಟಕ್ಕೆ)

## ಜಾತಿ ನಿಂದನೆ : ಯುವರಾಜ್ ವಿರುದ್ಧ ಎಫ್‌ಐಆರ್



ಹಿಸಾರ್ (ಹರಿಯಾಣ), ಫೆ. 15 - ಕ್ರಿಕೆಟಿಗ ಯಜುವೇಂದ್ರ ಚಹಲ್ ಅವರ ಕುರಿತು ಜಾತಿಯ ಹೇಳಿಕೆ ನೀಡಿದ ಆರೋಪದ ಮೇಲೆ ಕ್ರಿಕೆಟಿಗ ಯುವ ರಾಜ್ ಸಿಂಗ್ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಭಾರತೀಯ ತಂಡದ ಉಪ ನಾಯಕ ರೋಹಿತ್ ಶರ್ಮಾ ಅವರ ಜೊತೆ ಇನ್‌ಸ್ಟಾ ಗ್ರಾಂನಲ್ಲಿ ನೇರ ಸಂವಾದ ನಡೆಸುತ್ತಿದ್ದ ಸಂದರ್ಭದಲ್ಲಿ ಯುವರಾಜ್ ಅವರು ಚಹಲ್ ಕುರಿತು ಆಕ್ಷೇಪಾರ್ಹ (2ನೇ ಪುಟಕ್ಕೆ)

# ಭತ್ತ ಬಿಟ್ಟು ಅಡಿಕೆಯತ್ತ ವಾಲಿದ ರೈತರು

**(1ನೇ ಪುಟದಿಂದ)** ಕ್ವಿಂಟಾಲ್ ರಾಗಿ ಮಾರಾಟ ಮಾಡಲು ಹೆಸರು ನೋಂದಾಯಿಸಿಕೊಂಡಿದ್ದಾರೆ. 16690 ಕ್ವಿಂ.ಭತ್ತ ಮಾರಾಟ ಮಾಡಲು 240 ರೈತರು ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದರು.

ಖರೀದಿ ಕೇಂದ್ರದಲ್ಲಿ ಹೆಸರು ನೋಂದಾಯಿಸಲು ಆಧಾರ್, ಪಹಣಿ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ಜೊತೆ ಫ್ರೂಟ್ ತಂತ್ರಾಂಶದಲ್ಲಿ ಹೆಸರು ನೋಂದಣಿಯಾಗಿರುವುದು ಕಡ್ಡಾಯವಾಗಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮಾತನಾಡುತ್ತಾ, ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು ಆರಂಭವಾಗಿವೆ. ಮೆಟ್ರಿಕ್ ನಂತರದ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಸರ್ಕಾರದ ಮಾರ್ಗಸೂಚಿ ಪ್ರಕಾರ ನೋಂದಣಿ ಮಾಡಿಕೊಳ್ಳಲಾಗುತ್ತಿದೆ ಎಂದರು. ವಿದ್ಯಾರ್ಥಿ ವೇತನ ನೀಡಲು ಅನುದಾನದ ಕೊರತೆ ಇದ್ದು, ಈ ತಿಂಗಳು ಸಿಗುವ ಸಾಧ್ಯತೆ ಇದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಮಾತನಾಡಿ, ತಾಲ್ಲೂಕಿನಲ್ಲಿ 503 ಅಂಗನವಾಡಿ ಕೇಂದ್ರಗಳಿದ್ದು, ರೊಟೇಷನ್ ಆಧಾರದಲ್ಲಿ 5 ಮಕ್ಕಳಿಗೆ ಮಾತ್ರ ಪ್ರವೇಶ ನೀಡಲಾಗುತ್ತಿದೆ ಎಂದರು. ಉಪಾಧ್ಯಕ್ಷೆ ಮೀನಾ ಟಿ.ಶ್ರೀನಿವಾಸ್, ಅಂಗನವಾಡಿಗಳಲ್ಲಿ ಮಕ್ಕಳಿಗೆ ಬಿಸಿ ನೀರು ಕೊಡಲು ಕ್ರಮ ಕೈಗೊಳ್ಳುವಂತೆ ಹೇಳಿದರು.

**35 ಅಪೌಷ್ಠಿಕ ಮಕ್ಕಳು :** ತಾಲ್ಲೂಕಿನಲ್ಲಿ 35 ಅಪೌಷ್ಠಿಕತೆ ಇರುವ ಮಕ್ಕಳನ್ನು ಗುರುತಿಸಲಾಗಿದೆ. ಪ್ರತಿ ಮಗುವಿನ ಚಿಕಿತ್ಸೆಗೆ ಸರ್ಕಾರ 2 ಸಾವಿರ ಹಣ ನೀಡುತ್ತಿದೆ. ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡುವ ಜೊತೆಗೆ, ಪ್ರತಿ ಮೂರು ತಿಂಗಳಿಗೊಮ್ಮೆ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂದರು.

ತಾಲ್ಲೂಕಿನಲ್ಲಿ ಶೇ.101ರಷ್ಟು ಪಲ್ಸ್ ಪೋಲಿಯೋ ಲಸಿಕೆ ನೀಡಿ ಗುರಿ ಸಾಧಿಸಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಹೇಳಿದರು. ಜನವರಿ 30 ರಿಂದ ಫೆಬ್ರವರಿ 30ರವರೆಗೆ ಆಶಾ ಹಾಗೂ ಆರೋಗ್ಯ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಕುಷ್ಠರೋಗ ಗುಣಲಕ್ಷಣ ಇರುವವರನ್ನು ತಪಾಸಣೆ ಮಾಡಿ, ಚಿಕಿತ್ಸೆ ನೀಡಲಾಗುತ್ತಿದೆ ಎಂದರು.

ಅಪೌಷ್ಠಿಕತೆ ಇರುವ ಮಕ್ಕಳಿಗೆ ಜಿಲ್ಲಾಸ್ಪತ್ರೆಯಲ್ಲಿನ ಎನ್‌ಆರ್‌ಸಿ ಕೇಂದ್ರದಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಲಾಗಿದೆ. ತಾಯಂದಿರಿಗೆ ಶೇಂಗಾ, ಬೆಲ್ಲ, ಕಡಲೆ ಮಿಶ್ರಣವುಳ್ಳ ದಾವಣಗೆರೆ ಮಿಕ್ಸ್ ಎಂಬ ಪ್ರೋಟೀನ್ ಯುಕ್ತ ಆಹಾರ ನೀಡಲಾಗುವುದು ಎಂದರು.

ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಮಾತನಾಡಿ, ಈ ಬಾರಿ ಎಪ್ರಿಲ್-ಮೇ ತಿಂಗಳ ಬೇಸಿಗೆ ರಜೆ ನೀಡದಂತೆ 9 ಹಾಗೂ 10ನೇ ತರಗತಿ ಮಕ್ಕಳ ಸಿಲೆಬಸ್ ಪೂರ್ಣಗೊಳಿಸಲು ಸರ್ಕಾರ ಸೂಚಿಸಿದೆ ಎಂದರು.

## ಹೆತ್ತವರ ಜೀವನ ಶೈಲಿಯಿಂದ ಮಕ್ಕಳಿಗೆ ಕ್ಯಾನ್ಸರ್

ಹೆತ್ತವರ ಉತ್ತಮ ಜೀವನ ಶೈಲಿ ಹೊಂದಿರದೇ ಇರುವುದು ಮಕ್ಕಳಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳಲು ಕಾರಣ ಎಂದು ತಾಲ್ಲೂಕು ವೈದ್ಯಾಧಿಕಾರಿ ಸಭೆಯಲ್ಲಿ ಹೇಳಿದರು.

ಮಕ್ಕಳಲ್ಲಿ ಕ್ಯಾನ್ಸರ್‌ಗೆ ಕಾರಣವೇನು ಎಂದು ತಾ.ಪಂ.ನ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷೆ ಮಂಜುಳಾ ಅಣಬೇರು ಶಿವಮೂರ್ತಿ ಅವರ ಪ್ರಶ್ನೆಗೆ ಉತ್ತರಿಸಿದ ಆರೋಗ್ಯಾಧಿಕಾರಿ ಮೇಲಿನಂತೆ ಉತ್ತರಿಸಿದರು. ಹೆಚ್ಚಾಗಿ ಹೊರಗಿನ ಆಹಾರ ಸೇವನೆ ಮೂಲಕ ರಾಸಾಯನಿಕ ದೇಹ ಸೇರುತ್ತದೆ. ಇದು ಜನಿಸುವ ಮಕ್ಕಳ ಮೇಲೂ ಪರಿಣಾಮ ಬೀರುತ್ತದೆ ಎಂದರು.

## ಹದಿ ಹರೆಯದ ಸ್ನೇಹ ಆರೋಗ್ಯ ಕೇಂದ್ರ

10 ರಿಂದ 19 ವರ್ಷದೊಳಗಿನ ಮಕ್ಕಳು ಅನುಭವಿಸುವ ಸಮಸ್ಯೆಗಳ ಬಗ್ಗೆ ಆಪ್ತ ಸಮಾಲೋಚನೆ ನಡೆಸಲು ಆಪ್ತ ಸಮಾಲೋಚನಾ ಕೇಂದ್ರವನ್ನು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಆರಂಭಿಸಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ತಿಳಿಸಿದರು.

ಪ್ರತಿ ಗುರುವಾರ ಹಾಗೂ ಶನಿವಾರ ಮಧ್ಯಾಹ್ನ 3 ಗಂಟೆಯಿಂದ 5 ಗಂಟೆವರೆಗೆ ಮಕ್ಕಳ ತಜ್ಞರೊಂದಿಗೆ ಮುಕ್ತವಾಗಿ ಸಮಾಲೋಚನೆ ನಡೆಸಬಹುದಾಗಿದೆ ಎಂದರು.

# ಮೈಲಾರ ಜಾತ್ರೆ: ನಿರ್ಬಂಧ



**(1ನೇ ಪುಟದಿಂದ)** ರೀತಿಯ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿತ್ತೋ ಅದೇ ರೀತಿಯ ಸೌಲಭ್ಯಗಳನ್ನು ಕಲ್ಪಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಜಿಲ್ಲಾಧಿಕಾರಿ ಮಾಲಪಾಟಿ ಅವರು, ಮೈಲಾರ ಶ್ರೀ ಮೈಲಾರಲಿಂಗ ಸ್ವಾಮಿ ದೇವಸ್ಥಾನದ ರೂಢಿ ಸಂಪ್ರದಾಯದ ಪೂಜಾ ಕಾರ್ಯ,ಧಾರ್ಮಿಕ ಕಾರ್ಯಗಳಿಗೆ ಯಾವುದೇ ರೀತಿಯ ಚ್ಯುತಿ ಬಾರದಂತೆ ನಿರ್ವಹಿಸಲು ಸೂಚನೆ ನೀಡಿದರು.

**ಧ್ವನಿವರ್ಧಕ ವ್ಯವಸ್ಥೆ ಮಾಡಿ :** ಕಾರಣಿಕ ಮೈದಾನದಲ್ಲಿ ಕಾರಣಿಕ ನುಡಿ ಸ್ಪಷ್ಟವಾಗಿ ಕೇಳುವ ಹಾಗೆ ಧ್ವನಿವರ್ಧಕ ವ್ಯವಸ್ಥೆ ಮತ್ತು ಕಾರಣಿಕ ನುಡಿಯನ್ನು ಸೆರೆ ಹಿಡಿಯಲು ಅತ್ಯಾಧುನಿಕ ಸಲಕರಣೆಗಳನ್ನು ಬಳಸಿಕೊಂಡು ರಿಕಾರ್ಡ್ ಮಾಡಿಕೊಳ್ಳುವ ವ್ಯವಸ್ಥೆ ಹಾಗೂ ಮಾಧ್ಯಮಗಳ ಮೂಲಕ ಬಿಡುಗಡೆ ಮಾಡುವ ವ್ಯವಸ್ಥೆ ಮಾಡುವಂತೆಯೂ ಡಿಸಿ ಮಾಲಪಾಟಿ ಅವರು ಸೂಚಿಸಿದರು.

ಕುರವತ್ತಿಯ ಮಲ್ಲಿಕಾರ್ಜುನಸ್ವಾಮಿ ಮತ್ತು ಬಸವೇಶ್ವರ ಸ್ವಾಮಿ ರಥೋತ್ಸವ ವಿಷಯದಲ್ಲಿ ಇದೇ ನಿಯಮಗಳನ್ನು ಅನುಸರಿಸಲು ಡಿಸಿ ಮಾಲಪಾಟಿ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲು ಅಡಾವತ್, ಜಿಪಂ ಸಿಇಒ ಕೆ.ಆರ್.ನಂದಿನಿ, ಎಡಿಸಿ ಪಿ.ಎಸ್.ಮಂಜುನಾಥ ಅವರು ಮಾತನಾಡಿದರು.

ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಪ್ರಕಾಶ, ಹಡಗಲಿ ತಹಸೀಲ್ದಾರ್ ವಿಶ್ವಜಿತ್ ಮೆಹತಾ, ತಾಪಂ ಇಒ ಸೋಮಶೇಖರ, ಪೊಲೀಸ್ ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

# ದೇವರಬೆಳಕೆರೆಯಲ್ಲಿ ಕುಷ್ಠರೋಗ ಅರಿವು ಆಂದೋಲನ



ಮಲೇಬೆನ್ನೂರು, ಫೆ.15- ದೇವರಬೆಳಕೆರೆ ಗ್ರಾಮದ ಶ್ರೀ ಮೈಲಾರ ಲಿಂಗೇಶ್ವರ ಪ್ರೌಢಶಾಲೆಯಲ್ಲಿ ಆರೋಗ್ಯ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಸ್ಪರ್ಶ ಕುಷ್ಠರೋಗ ಕುರಿತು ಅರಿವು ಆಂದೋಲನಾ ಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ, ಕುಷ್ಠರೋಗ ಅನುವಂಶೀಯವೂ ಅಲ್ಲ, ಶಾಶ್ವತವೂ ಅಲ್ಲ. ಅದೊಂದು ಮೈಕ್ರೋಬ್ಯಾಕ್ಟೀರಿಯಂ ಲೆಪ್ರೆ ಎಂಬ ಸೂಕ್ಷ್ಮಾಣುವಿನಿಂದ ಬರುತ್ತದೆ. ಶೀಘ್ರ ಪತ್ತೆ, ತ್ವರಿತ ಚಿಕಿತ್ಸೆಯಿಂದ ಅಂಗವಿಕಲತೆಯನ್ನು ತಪ್ಪಿಸಬಹುದೆಂದು ವಿವರಿಸಿದರು.

ಗ್ರಾ.ಪಂ. ಅಧ್ಯಕ್ಷೆ ಗೀತಮ್ಮ ಅಧ್ಯಕ್ಷತೆ ವಹಿಸಿದ್ದರು. ವೈದ್ಯಾಧಿಕಾರಿ ಡಾ. ದರ್ಶನ, ಶಾಲಾ ಮುಖ್ಯ ಶಿಕ್ಷಕ ಬಸವನಗೌಡ, ಕಿರಿಯ ಆರೋಗ್ಯ ಸಹಾಯಕರಾದ ಬಿ. ಆದರ್ಶ, ಪರಶುರಾಮಪ್ಪ, ರೇಖಾ ಮತ್ತು ಶಾಲೆಯ ಶಿಕ್ಷಕರು ಸಭೆಯಲ್ಲಿ ಭಾಗವಹಿಸಿದ್ದರು.

# ಮತ್ತೆ ಹರಿಹಾಯ್ದ ಯತ್ನಾಳ್

**(1ನೇ ಪುಟದಿಂದ)** ಕುಟುಂಬ ಮಾರಿಷಸ್‌ಗೆ ಹೋಗಿದ್ದಾದರೂ ಏಕೆ? ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಅವರು ಮುಕ್ತವಾಗಿ ಕೆಲಸ ಮಾಡಲು ಪುತ್ರ ಬಿ.ವೈ. ವಿಜಯೇಂದ್ರ ಅವಕಾಶ ಮಾಡಿಕೊಡುತ್ತಿಲ್ಲ, ಅವರು ತಂದೆಯ ಹೆಸರನ್ನು ಹಾಳು ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಕುಟುಂಬದ ಹಸ್ತಕ್ಷೇಪದಿಂದಲೇ ಮುಖ್ಯಮಂತ್ರಿ ಅವರೂ ಬದಲಾಗಿದ್ದಾರೆ, ವಿಜಯೇಂದ್ರ ಅವರ ಕೈಕಾಲು ಒತ್ತುವವರಿಗೆ ನಿಗಮ-ಮಂಡಳಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ, ಪಕ್ಷದ ನಿಷ್ಠಾವಂತರನ್ನು ಕಡೆಗಣಿಸಿದ್ದಾರೆ.

ತಮಗೆ ಆಗದವರ ವಿರುದ್ಧ ಅಪಪ್ರಚಾರ ನಡೆಸಲು ವಿಜಯೇಂದ್ರರ ಬಳಿ ನಕಲಿ ಸಿ.ಡಿ. ತಯಾರಿಸುವ ದೊಡ್ಡ ಗುಂಪೇ ಇದೆ.

ಯಡಿಯೂರಪ್ಪ ಪ್ರತಿಪಕ್ಷದ ನಾಯಕರಾಗಿದ್ದಾಗ, ಗನ್‌ಮ್ಯಾನ್ ಹೊರತುಪಡಿಸಿ, ಅವರ ಕುಟುಂಬದವರಾರೂ ಹತ್ತಿರ ಸುಳಿಯುತ್ತಿರಲಿಲ್ಲ, ಅವರು ಮುಖ್ಯಮಂತ್ರಿ ಆಗುತ್ತಿದ್ದಂತೆ ಇಡೀ ಕುಟುಂಬ ನಿವಾಸ ಸೇರಿಬಿಟ್ಟಿದೆ.

ಯಡಿಯೂರಪ್ಪ ಪಕ್ಷ ಕಟ್ಟುವಾಗ ಅವರ ಕಾರಿಗೆ ನಾನು ಪೆಟ್ರೋಲ್ ಹಾಕಿಸಿದ್ದೇನೆ, ಆದರೆ, ಮುಖ್ಯಮಂತ್ರಿ ಆದ ನಂತರ ಪುತ್ರ ವ್ಯಾಮೋಹ ಪರಾಕಾಷ್ಠೆ ತಲುಪಿದೆ ಎಂದು ಯತ್ನಾಳ್ ದೂರಿದ್ದಾರೆ.

# ನ್ಯಾಮತಿ : ಬೋಗ್ ಹೋಮದೊಂದಿಗೆ ಸೇವಾಲಾಲ್ ಜಯಂತಿಗೆ ತೆರೆ



ನ್ಯಾಮತಿ, ಫೆ.15- ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಸೋಮವಾರ ಮಾಲಾಧಾರಿಗಳಿಂದ ಬೋಗ್ ಹೋಮ ನಡೆಸುವ ಮೂಲಕ ಸಂತ ಸೇವಾಲಾಲ್ ಜಯಂತ್ಯೋತ್ಸವ ಮುಕ್ತಾಯಗೊಂಡಿತು.

ಶಾಸಕ ರೇಣುಕಾಚಾರ್ಯರು ಬೋಗ್‌ನಲ್ಲಿ ಪಾಲ್ಗೊಂಡು ಮಾಲಾಧಾರಿಗಳಿಗೆ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಕಳೆದ ಒಂದು ವಾರದಿಂದ ತಾಲ್ಲೂಕು ಹಾಗೂ ಜಿಲ್ಲೆಯ ಅಧಿಕಾರಿ ವರ್ಗದವರು, ಕಾರ್ಯಕ್ರಮದ ಆಯೋಜಕರು ಶ್ರಮವಹಿಸಿದ ಪರಿಣಾಮದಿಂದಾಗಿ ಕಾರ್ಯಕ್ರಮ ಯಶಸ್ವಿಯಾಗಲು ಸಹಕಾರವಾಯಿತು ಹಾಗೂ ತಾಂಡಾ ಅಭಿವೃದ್ಧಿ ನಿಗಮ, ಕ್ಷೇತ್ರ ಅಭಿವೃದ್ಧಿ ನಿರ್ವಾಣ ಪ್ರತಿಷ್ಠಾನ, ಜನ್ಮಸ್ಥಾನ ಮಹಾಮಠ ಸಮಿತಿ ಜಯಂತೋತ್ಸವ ಸಮಾರಂಭವನ್ನು ಅಚ್ಚುಕಟ್ಟಾಗಿ ನಡೆಸಿವೆ ಎಂದರು.

ಶಾಸಕ ರಾಜೀವ್, ನಿಗಮದ ನಿರ್ದೇಶಕ ಮಾರುತಿನಾಯ್ಕ, ಹೊನ್ನಾಳಿ ಈಶ್ವರನಾಯ್ಕ ಸೇರಿದಂತೆ ಇತರೆ ಗಣ್ಯರು ಮಾಲಾಧಾರಿಗಳು ಬೋಗ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಾತಿ ನಿಂದನೆ: ಎಫ್‌ಐಆರ್

**(1ನೇ ಪುಟದಿಂದ)** ಹೇಳಿಕೆ ನೀಡಿದ್ದರು. ನಂತರ ಸಿಂಗ್ ತಮ್ಮ ಹೇಳಿಕೆಯ ಬಗ್ಗೆ ಕ್ಷಮೆಯನ್ನೂ ಯಾಚಿಸಿದ್ದರು. ವಕೀಲ ರಜತ್ ಕಲ್ಸನ್ ಅವರು ಹನ್ಸಿ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಎಫ್.ಐ.ಆರ್. ದಾಖಲಿಸಿದ್ದಾರೆ ಎಂದು ಹನ್ಸಿ ಎಸ್‌ಪಿ ನಿಕಿತಾ ಗಹ್ಲಾವತ್ ತಿಳಿಸಿದ್ದಾರೆ.

ಸಿಂಗ್ ಹೇಳಿಕೆಯಿಂದ ದಲಿತ ಸಮುದಾಯದ ಭಾವನೆಗಳಿಗೆ ನೋವಾಗಿದೆ. ಸಾಕಷ್ಟು ಸಂಖ್ಯೆಯ ಜನರು ಸಾಮಾಜಿಕ ಮಾಧ್ಯಮಗಳ ವಿಡಿಯೋ ನೋಡುತ್ತಿರುತ್ತಾರೆ ಎಂದು ಕಲ್ಸನ್ ದೂರಿನಲ್ಲಿ ಹೇಳಿದ್ದಾರೆ.

# ನಗರದಲ್ಲಿ ಇಂದು ಸ್ಫೂರ್ತಿದಾಯಕ ಕಾರ್ಯಕ್ರಮ

ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಇಂದು ಬೆಳಿಗ್ಗೆ 9 ಗಂಟೆಗೆ ಪರಿಚಯಾತ್ಮಕ ಹಾಗೂ ಸ್ಫೂರ್ತಿದಾಯಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಕಾಲೇಜಿನ ಹಳೆಯ ವಿದ್ಯಾರ್ಥಿಗಳಾದ ಪುತ್ತೂರಿನ ವಿವೇಕಾನಂದ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಡಾ. ಶೇಖರ್ ಎಸ್. ಅಯ್ಯರ್ ಮತ್ತು ಬೆಂಗಳೂರಿನ ರಾವ್ಸ್ ಪಬ್ಲಿಷರ್ಸ್ ಸಿಇಒ ಪಿ.ಎಸ್. ಸುಧೀಂದ್ರರಾವ್ ಅವರು ಆಗಮಿಸಿ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

# ಹರಿಹರ : ಸಮಾವೇಶಕ್ಕೆ ಸರ್ವೋದಯ ಮಹಾಸಂಸ್ಥಾನ ಮಠದ ಶಿವಕುಮಾರ ಶ್ರೀ



ಹರಿಹರ, ಫೆ.15- ಪಂಚಮಸಾಲಿ ಸಮಾಜದ ಬಡ ಕುಟುಂಬಗಳ ಮಕ್ಕಳ ಶಿಕ್ಷಣಕ್ಕೆ 2ಎ ಮೀಸಲಾತಿಗಾಗಿ ಕೂಡಲಸಂಗಮದಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡುತ್ತಿರುವ ಶ್ರೀ ಜಯಮೃತ್ಯುಂಜಯ ಮಹಾಸ್ವಾಮಿಗಳ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವುದರ ಜೊತೆಗೆ ದಿನಾಂಕ 21 ರಂದು ನಡೆಯುವ ಸಮಾವೇಶದಲ್ಲಿ ಭಾಗವಹಿಸುವುದಾಗಿ ಸರ್ವೋದಯ ಮಹಾಸಂಸ್ಥಾನ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ತಿಳಿಸಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ವಿಷಯ ತಿಳಿಸಿದರು. ರಾಜ್ಯದಲ್ಲಿನ ಪಂಚಮಸಾಲಿ ಸಮಾಜದ ಇತಿಹಾಸವನ್ನು ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂತಹ ಮಹತ್ವದ ಕಾರ್ಯವನ್ನು ಮಾಡುತ್ತಿರುವ ಶ್ರೀಗಳ ಕಾರ್ಯ, ಪಂಚ ಲಕ್ಷ ಹೆಜ್ಜೆ. ನಾವು ನಿಜವಾದ ಕಿತ್ತೂರು ರಾಣಿ ಚೆನ್ನಮ್ಮ ವಂಶಸ್ಥರು ಎಂದು ಸಮಾಜದ ಸತ್ಯ ದರ್ಶನವನ್ನು ಜಗತ್ತಿಗೆ ತೋರಿಸುವ ಕಾರ್ಯವಾಗಿದೆ.

ಉಭಯ ಜಗದ್ಗುರುಗಳ ನೇತೃತ್ವದಲ್ಲಿ ಸಮಾಜಕ್ಕೆ ಕೇಳುತ್ತಿರುವ 2ಎ ಮೀಸಲಾತಿ ಬೇಡಿಕೆ ಸಮಾಜದ ಮಕ್ಕಳ ಶಿಕ್ಷಣಕ್ಕೆ ನ್ಯಾಯಯುತವಾಗಿದೆ. ರಾಜ್ಯದಲ್ಲಿ 80 ಲಕ್ಷ ಜನಸಂಖ್ಯೆ ಹೊಂದಿರುವ ಪಂಚಮಸಾಲಿ ಸಮಾಜದ ಬಡವರನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಕೂಡಲೇ ಸ್ಪಂದಿಸುವ ಕೆಲಸ ಮಾಡಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಸರ್ವೋದಯ ಮಹಾಸಂಸ್ಥಾನದ ಅಧ್ಯಕ್ಷ ದೊಗ್ಗಳ್ಳಿ ಗುರುಮೂರ್ತಿ, ಪ್ರಧಾನ ಕಾರ್ಯದರ್ಶಿ ಪಿ. ರುದ್ರಮುನಿ, ಖಜಾಂಚಿ ರವಿಗೌಡ ಮತ್ತು ಇತರರು ಹಾಜರಿದ್ದರು.

# ಸಿರಿಗೆರೆ ಶ್ರೀಗಳಿಗೆ 'ಆದಿಕವಿ' ಪ್ರಶಸ್ತಿ

**(1ನೇ ಪುಟದಿಂದ)** ಗುರುಶಾಂತೇಶ್ವರ ದಾಸೋಹ ಭವನದಲ್ಲಿ ಫೆ. 21ರಂದು ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅಧ್ಯಕ್ಷತೆ ವಹಿಸುವರು. ಉತ್ತರದ ಧರ್ಮ ಜಾಗರಣ ಪ್ರಾಂತ ಸಹ ಸಂಯೋಜಕ ಡಾ. ಹನುಮಂತ ಮಳಲಿ, ಪರಿಷತ್ ರಾಜ್ಯ ಅಧ್ಯಕ್ಷ ಪ್ರೊ. ಪ್ರೇಮಶೇಖರ, ಹಿರಿಯ ಉಪಾಧ್ಯಕ್ಷ ಬಾಗಲಕೋಟೆಯ ಎಸ್.ಜಿ. ಕೋಟಿ, ಇಸ್ರೋ ಮಾಜಿ ವಿಜ್ಞಾನಿ ಕೆ. ಹರೀಶ್, ಉದ್ಯಮಿಗಳಾದ ವೀಣಾ ಜಯರಾಮ್, ಎಸ್. ಜಯರಾಮ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನಿಂದ ಈಗಾಗಲೇ ಎರಡು ಪ್ರಾಂತ ಸಮ್ಮೇಳನ ನಡೆಸಲಾಗಿದೆ. ಮೂರನೇ ಸಮ್ಮೇಳನವನ್ನು ಡಿಸೆಂಬರ್‌ನಲ್ಲಿ ಉಜಿರೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. 5 ವರ್ಷಗಳಿಂದ ಪರಿಷತ್ ಅನ್ನು ರಾಜ್ಯದಾದ್ಯಂತ ಬಲಿಷ್ಠವಾಗಿ ಸಂಘಟಿಸಲಾಗುತ್ತಿದೆ ಎಂದು ಭಟ್ ಹೇಳಿದರು.

ಪರಿಷತ್‌ನ ಕಾರ್ಯಕರ್ತರು ರಾಜ್ಯದ ಬಹುತೇಕ ಜಿಲ್ಲೆ, ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಸಂದಿಗ್ಧ ಪರಿಸ್ಥಿತಿಯಲ್ಲಿ ಒಂದು ತಿಂಗಳ ಕಾಲ ನಿರ್ಗತಿಕರು, ಕಷ್ಟದಲ್ಲಿರುವವರಿಗೆ ಆಹಾರ ಧಾನ್ಯ, ವಿವಿಧೆಡೆ ಹಸುಗಳಿಗೆ ಮೇವು ಒದಗಿಸುವಲ್ಲೂ ಸಫಲರಾಗಿದ್ದಾರೆ ಎಂದು ರಘುನಂದನ್ ಭಟ್ ತಿಳಿಸಿದರು.

ಸಂಸ್ಕಾರ ಭಾರತೀಯ ಡಾ. ಕೆ. ರಾಜೀವಲೋಚನ, ಪರಿಷತ್ ಸಂಘಟಕ ಡಿ.ಓ. ಮುರಾರ್ಜಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಕೇಂದ್ರ, ವಾಟ್ಸ್‌ಆಪ್‌ಗಳಿಗೆ ನೋಟಿಸ್

**(1ನೇ ಪುಟದಿಂದ)** ಕೊಡುತ್ತಾರೆ ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಅವರ ನೇತೃತ್ವದ ಪೀಠ ಹೇಳಿದೆ. ಯುರೋಪ್‌ನಲ್ಲಿ ಮಾಹಿತಿ ರಕ್ಷಣೆಗೆ ವಿಶೇಷ ಕಾಯ್ದೆಗಳಿವೆ, ಭಾರತದಲ್ಲಿ ಅಂತಹ ಕಾಯ್ದೆಗಳಿಲ್ಲ ಎಂದು ವಾಟ್ಸ್‌ಆಪ್ ಹೇಳಿದಾಗ ನ್ಯಾಯಾಲಯ ಈ ಟಿಪ್ಪಣಿ ಮಾಡಿದೆ.

ಕರ್ಮಣ್ಯ ಸಿಂಗ್ ಸರೀನ್ ಎಂಬುವವರು ದಾಖಲಿಸಿದ ಅರ್ಜಿಯ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಕೇಂದ್ರ, ಸರ್ಕಾರ ಹಾಗೂ ವಾಟ್ಸ್‌ಆಪ್‌ಗಳಿಗೆ ನೋಟಿಸ್ ಕಳಿಸಿದೆ.

ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಶ್ಯಾಮ್ ದಿವಾನ್, ವಾಟ್ಸ್‌ಅಪ್ ಭಾರತೀಯರಿಗೆ ಕೆಳ ಮಟ್ಟದ ಖಾಸಗಿತನದ ನಿಯಮಗಳನ್ನು ಅನ್ವಯಿಸುತ್ತಿದೆ ಎಂದು ಹೇಳಿದರು.


ಇದಕ್ಕೆ ಸ್ಪಂದಿಸಿದ ಪೀಠ, ಮಾಹಿತಿ ರಕ್ಷಣೆ ಕಾಯ್ದೆ ಜಾರಿಗೆ ತರಬೇಕು ಎಂಬ ಪ್ರಸ್ತಾವನೆ ನ್ಯಾಯಾಲಯದ ಎದುರಿದೆ ಎಂದು ತಿಳಿಸಿದರು.

ವಾಟ್ಸ್‌ಆಪ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಾಲ್, ಯುರೋಪ್‌ನಲ್ಲಿ ಮಾಹಿತಿ ರಕ್ಷಣೆಗೆ ವಿಶೇಷ ಕಾಯ್ದೆ ಇದೆ. ಭಾರತದ ಸಂಸತ್ತೂ ಸಹ ಇದೇ ರೀತಿಯ ಕಾಯ್ದೆ ಜಾರಿಗೆ ತಂದರೆ ಅದನ್ನು ಪಾಲಿಸಬಹುದು ಎಂದರು.

ಖಾಸಗಿತನ ಕಳೆದುಹೋಗುವ ಭೀತಿ ನಾಗರಿಕರಲ್ಲಿದೆ ಎಂದು ಹೇಳಿದ ಪೀಠ, ಜನರ ಮಾಹಿತಿಯನ್ನು ಬೇರೆಯವರ ಜೊತೆ ಹಂಚಿಕೊಳ್ಳಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಎಂದು ಹೇಳಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರಿದ್ದಾರೆ.

ಪೀಠದ ಎದುರು ಹಾಜರಿದ್ದ ಕೇಂದ್ರ ಸರ್ಕಾರ, ಸಾಮಾಜಿಕ ಮಾಧ್ಯಮ ಆಪ್‌ಗಳು ಜನರಿಂದ ಪಡೆದ ಮಾಹಿತಿಯನ್ನು ಬೇರೆಯವರ ಜೊತೆ ಹಂಚಿಕೊಳ್ಳುವಂತಿಲ್ಲ ಎಂದು ತಿಳಿಸಿತು.

# ಉಚ್ಚಂಗಿ ದುರ್ಗಕ್ಕೆ ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ ಭೇಟಿ



ಹರಪನಹಳ್ಳಿ, ಫೆ.15- ತಾಲ್ಲೂಕಿನ ಉಚ್ಚಂಗಿದುರ್ಗದಲ್ಲಿ ಪ್ರತಿ ವರ್ಷ ಜರುಗುವ ಭಾರತ ಹುಣ್ಣಿಮೆಗೆ ಸಾವಿರಾರು ಜನ ಭಾಗವಹಿಸುವ ನಿರೀಕ್ಷೆ ಇದ್ದು, ಶ್ರೀಕ್ಷೇತ್ರಕ್ಕೆ ಬರುವ ಭಕ್ತರಿಗೆ ಮೂಲಸೌಕರ್ಯಗಳ ಕೊರತೆಯಾಗದಂತೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉಪವಿಭಾಗಾಧಿಕಾರಿ ಹೆಚ್.ಜಿ. ಚಂದ್ರಶೇಖರಯ್ಯ, ಸಿಪಿಐ ನಾಗರಾಜ ಕಮ್ಮಾರ್, ಅರಸಿಕೇರಿ ಪಿಎಸ್‌ಐ ಕಿರಣ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

# ಯಕ್ಷಗಾನ ತರಬೇತಿ ಶಿಬಿರ

ದಾವಣಗೆರೆ, ಫೆ.13- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗಸಂಸ್ಥೆ ಯಕ್ಷರಂಗದಿಂದ ವಿಶ್ವ ರಂಗಭೂಮಿ ದಿನಾಚರಣೆ ಅಂಗವಾಗಿ ಯಕ್ಷಗಾನ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ.

10 ವರ್ಷ ಮೇಲ್ಪಟ್ಟ ಮಕ್ಕಳು, ಹಿರಿಯರು ಇದೇ ದಿನಾಂಕ 20 ರೊಳಗೆ ಭರ್ತಿ ಮಾಡಿ ಸಾಲಿಗ್ರಾಮ ಗಣೇಶ್ ಶೆಣೈ, ಸಂಸ್ಥಾಪಕ ಯಕ್ಷರಂಗ ಯಕ್ಷಗಾನ ಸಂಸ್ಥೆ, ಕುವೆಂಪು ರಸ್ತೆ, ಕಸ್ತೂರಿ ಬಾ ಬಡಾವಣೆ, ದಾವಣಗೆರೆ-577002, ಇಲ್ಲಿಗೆ ಕಳುಹಿಸುವುದು. ವಿವರಕ್ಕೆ ಮೊ: 9901122728, 9449374300 ಸಂಪರ್ಕಿಸಲು ಕಾರ್ಯದರ್ಶಿ ಬೇಳೂರು ಸಂತೋಷ್ ಕುಮಾರ ಶೆಟ್ಟಿ ಹಾಗೂ ಖಜಾಂಚಿ ನೀಲಾವರ ಭಾಸ್ಕರ ನಾಯಕ್ ತಿಳಿಸಿದ್ದಾರೆ.

# ಎಂ.ಎಫ್.ಸಿಗ್ಬತ್‌ಉಲ್ಲಾ ಜರಿಕಡಿ ನಿಧನ



ಹರಿಹರ ಗಾಂಧಿನಗರದ ವಾಸಿ ದಿ.ಎಂ.ಫಕ್ರುದ್ದೀನ್‌ಸಾಬ್ ಜರಿಕಡಿ ಇವರ ಪುತ್ರ, ಎಚ್.ಎಂ.ಎಫ್ ಸಾಮಿಲ್ ಮಾಲೀಕರೂ ಹಾಗೂ ನಗರಸಭಾ ಸದಸ್ಯ ಎಂ.ಆರ್.ಮುಜಾಮ್ಮಿಲ್ ರವರ ಚಿಕ್ಕಪ್ಪನವರಾದ

**ಎಂ.ಎಫ್.ಸಿಗ್ಬತ್‌ಉಲ್ಲಾ ಜರಿಕಡಿ** (52)

ಇವರು ದಿನಾಂಕ 15.02.2021 ರ ಸೋಮವಾರ ಮಧ್ಯಾಹ್ನ 3ಕ್ಕೆ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.02.2021 ರ ಮಂಗಳವಾರ ಬೆಳಿಗ್ಗೆ 11ಕ್ಕೆ ನಗರದ ಖಬರಸ್ತಾನದಲ್ಲಿ ನಡೆಯಲಿದೆ.

**ಇಂತಿ ದುಃಖತಪ್ತರು: ಜರಿಕಡಿ ವಂಶಸ್ಥರು, ಹರಿಹರ**

# ದಿಶಾ ರವಿ, ನಿಕಿತಾ, ಶಂತನು ಸೇರಿ ರಚಿಸಿದ ಟೂಲ್‌ಕಿಟ್

**(1ನೇ ಪುಟದಿಂದ)** ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದರು.

ಟೂಲ್‌ಕಿಟ್ ರೂಪಿಸಲಾದ ಬಳಸಲಾದ ಗೂಗಲ್ ಡಾಕ್ಸ್‌ನ ಖಾತೆಯನ್ನು ಶಂತನು ತೆರೆದಿದ್ದರು. ಖಲಿಸ್ತಾನ ಪರ ಸಂಘಟನೆಯಾದ ಪೊಯೆಟಿಕ್ ಜಸ್ಟೀಸ್ ಫೌಂಡೇಷನ್ (ಪಿ.ಜೆ.ಎಫ್.) ಸ್ಥಾಪಕ ಧಾಲಿವಾಲ್ ಕೆನಡಾದ ಮಹಿಳೆ ಪುನೀತ ಮೂಲಕ ಟೂಲ್‌ಕಿಟ್ ರೂಪಿಸುವವರನ್ನು ಸಂಪರ್ಕಿಸಿದ್ದಾಗಿ ಪ್ರೇಮ ನಾಥ ಹೇಳಿದ್ದಾರೆ.

ಜನವರಿ 26ರಂದು ಗ್ಲೋಬಲ್ ಡೇ ಆಫ್ ಆಕ್ಷನ್ ಹಾಗೂ ಗ್ಲೋಬಲ್ ಫಾರ್ಮರ್ ಸ್ಟ್ರೈಕ್ ಎಂದು ಟೂಲ್‌ಕಿಟ್‌ನಲ್ಲಿ ತಿಳಿಸಲಾಗಿತ್ತು. ಇದೇ ದಿನ ಟ್ರ್ಯಾಕ್ಟರ್ ಪರೇಡ್‌ನಲ್ಲಿ ರೈತರು ನಡೆಸಿದ ಹಿಂಸಾಚಾರದಲ್ಲಿ 500ಕ್ಕೂ ಹೆಚ್ಚು ಪೊಲೀಸರು ಗಾಯಗೊಂಡಿದ್ದರು.

ನಿಕಿತಾ, ಶಂತನು, ದಿಶಾ ಹಾಗೂ ಇತರರು ಟೂಲ್‌ಕಿಟ್ ರೂಪಿಸಿದ್ದರು. ನಿಕಿತಾ ಹಾಗೂ ಬಳಕೆಯಾದ ಉಪಕರಣಗಳಿಂದ ದೊರೆತ ಮಾಹಿತಿಯ ಆಧರಾದ ಮೇಲೆ ಹಲವಾರು ತಂಡಗಳನ್ನು ಮಹಾರಾಷ್ಟ್ರದ ಬೀಡ್ ಜಿಲ್ಲೆ ಹಾಗೂ ಬೆಂಗಳೂರಿಗೆ ಕಳಿಸಲಾಗಿದೆ. ಬೀಡ್‌ನಲ್ಲಿರುವ ಮನೆಯಲ್ಲಿ ಶಂತನು ಕಂಡು ಬಂದಿಲ್ಲ, ಇನ್ನೂ ಹುಡುಕಾಟ ನಡೆದಿದೆ ಎಂದವರು ಹೇಳಿದ್ದಾರೆ.

ಫ್ರೈಡ್ ಫಾರ್ ಫ್ಯೂಚರ್ ಸಂಘಟನೆಯ ಜೊತೆ ಗುರುತಿಸಿಕೊಂಡಿರುವ ದಿಶಾ, ಟೂಲ್‌ಕಿಟ್ ಅನ್ನು ಗ್ರೆಟಾ ಥನ್‌ಬರ್ಗ್‌ಗೆ ಟೆಲಿಗ್ರಾಂ ಆಪ್ ಮೂಲಕ ಕಳಿಸಿ ಕ್ರಮಕ್ಕೆ ಒತ್ತಾಯಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ದಿಶಾ ರವಿ ತಾಯಿ ಉಪಸ್ಥಿತಿಯಲ್ಲೇ ಬಂಧಿಸಲಾಗಿದೆ. ಬೆಂಗಳೂರಿನಲ್ಲಿ ಬಂಧಿಸುವಾಗ ಆ ಪ್ರದೇಶದ ಠಾಣಾಧಿಕಾರಿ ಉಪಸ್ಥಿತರಿದ್ದರು. ಬಂಧನದ ಎಲ್ಲ ಪ್ರಕ್ರಿಯೆಗಳನ್ನು ಪಾಲಿಸಲಾಗಿದೆ ಎದು ಪ್ರೇಮ ನಾಥ ಹೇಳಿದ್ದಾರೆ.

ಟೂಲ್‌ಕಿಟ್ ಪ್ರಕರಣದಲ್ಲಿ ಪೀಟರ್ ಫ್ರೆಡ್‌ರಿಕ್ ಎಂಬ ವ್ಯಕ್ತಿಯ ಪಾತ್ರದ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. 2006ರಲ್ಲಿ ಈತ ಭಜನ್ ಸಿಂಗ್ ಭಿಂದರ್ ಅಲಿಯಾಸ್ ಇಕ್ಬಾಲ್ ಚೌಧರಿ ಎಂಬಾತನ ಸಂಪರ್ಕದಲ್ಲಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಭಿಂದರ್ ಐ.ಎಸ್.ಐ.ನ ಪರವಾಗಿ ಕಾರ್ಯ ನಿರ್ವಹಿಸುತ್ತಿದ್ದ. ಪೀಟರ್ ಹೆಸರು ದಾಖಲೆಯಲ್ಲಿ ಏಕಿದೆ ಎಂಬ ಬಗ್ಗೆ ದಿಶಾ ಹಾಗೂ ಸಹಚರರಿಂದ ಮಾಹಿತಿ ಕೇಳಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

# ಸಮಾವೇಶಕ್ಕೆ ಅವಕಾಶ ಕೊಡಿ


**(1ನೇ ಪುಟದಿಂದ)** ಅವರು ಅಪಸ್ವರ ಎತ್ತಿದ ಹಿನ್ನೆಲೆಯಲ್ಲಿ ಮುಂದಾಗಬಹುದಾದ ಅಡ್ಡಿ, ಆತಂಕಗಳನ್ನು ನಿವಾರಿಸಿಕೊಳ್ಳಲು ರಾಹುಲ್ ಮೊರೆ ಹೋಗುತ್ತಿದ್ದಾರೆ.

ಖರ್ಗೆ ಅಪಸ್ವರ ಎತ್ತುವುದಕ್ಕೂ ಮುನ್ನವೇ ಮೊದಲ 'ಹಿಂದ' ಸಮಾವೇಶವನ್ನು ಮಾರ್ಚ್ ಎರಡನೇ ವಾರದಲ್ಲಿ ಮೈಸೂರು ಇಲ್ಲವೇ ಕಲಬುರಗಿಯಲ್ಲಿ ನಡೆಸಲು ತೀರ್ಮಾನ ಕೈಗೊಂಡಿದ್ದರು.

ರಾಹುಲ್ ಭೇಟಿ ಸಂದರ್ಭದಲ್ಲಿ 'ಹಿಂದ' ಸಮಾವೇಶವನ್ನು ಪಕ್ಷಕ್ಕೆ ಪರ್ಯಾಯವಾಗಿ ನಡೆಸುವುದಿಲ್ಲ, ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹಿಂದುಳಿದ ವರ್ಗಗಳ ಜಾತಿ ಸಮಾವೇಶ ಮಾಡುತ್ತೇನೆ.

ಆಡಳಿತಾರೂಢ ಬಿಜೆಪಿ, ಕರ್ನಾಟಕದಲ್ಲೂ ತಮ್ಮ ಪಕ್ಷದ ಮುಖಂಡರನ್ನು ಮುಂದಿಟ್ಟುಕೊಂಡು ಇಂತಹ ಸಮಾವೇಶಗಳನ್ನು ಹೊರಗಿನಿಂದ ನಡೆಸುತ್ತಿದೆ. ಇದಕ್ಕೆ ಆ ಪಕ್ಷದ ವರಿಷ್ಠರ ಅಭಯವೂ ಇದೆ, ಇವರ ಹೋರಾಟಕ್ಕೆ ಪ್ರತಿಯಾಗಿ ನಾವೂ ಜಾತಿ ಸಮಾವೇಶ ಮಾಡುವುದು ಅನಿವಾರ್ಯವಾಗಿದೆ ಎಂಬುದು ಸಿದ್ದರಾಮಯ್ಯ ನಿಲುವಾಗಿದೆ. ಇದಕ್ಕಾಗಿ ತಮಗೆ 'ಹಿಂದ' ಸಮಾವೇಶ ನಡೆಸಲು ಅನುವು ಮಾಡಿಕೊಡಬೇಕೆಂದು ಕೋರುವುದಕ್ಕಾಗಿಯೇ ಸಿದ್ದರಾಮಯ್ಯ ನಾಳೆ ರಾಹುಲ್ ಅವರನ್ನು ಭೇಟಿ ಮಾಡುತ್ತಿದ್ದಾರೆ.

# ವಿರುಪಾಪುರ ; ಲಾರಿ ಪಲ್ಟಿ : ದೂರು ದಾಖಲು



ಕೂಡ್ಲಿಗಿ, ಫೆ. 15- ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ವಿರುಪಾಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ತಮಿಳುನಾಡಿನ ಸೇಲಂ ಜಿಲ್ಲೆಯ ಲಾರಿ ಪಲ್ಟಿಯಾಗಿದೆ. ಲಾರಿ ಜಖಂಗೊಂಡಿದ್ದು ಲಾರಿಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ಕುರಿತು ಲಾರಿ ಮಾಲೀಕ ನೀಡಿದ ದೂರಿನನ್ವಯ, ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಲಾರಿ ಚಾಲಕ ತಮಿಳು ನಾಡು ಮೂಲದ ಚಿನ್ನಗುಂಡ ಗ್ರಾಮದ ಸೆಲ್ವಂ ಲಾರಿಯನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿರುವುದು ಘಟನೆಗೆ ಕಾರಣ ಎನ್ನಲಾಗಿದೆ. ಲಾರಿ ಮಾಲೀಕ ತಮಿಳುನಾಡಿನ ಸೇಲಂ ಜಿಲ್ಲೆಯ ಪಳೆಮಟ್ಟಿ ಗ್ರಾಮದ ಸುರೇಶ ನೀಡಿದ ದೂರಿನನ್ವಯ, ಕೂಡ್ಲಿಗಿ ಎಎಸ್‌ಐ ಎಂ. ರುದ್ರಮುನಿಯವರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

# ಹರಪನಹಳ್ಳಿ: ಅಪಘಾತ ಮೂವರು ಸಾವು

ಹರಪನಹಳ್ಳಿ, ಫೆ.15- ರಸ್ತೆ ಬದಿ ನಿಂತಿದ್ದ ಟ್ರ್ಯಾಕ್ಟರ್‌ಗೆ ಅದೇ ಮಾರ್ಗವಾಗಿ ಚಲಿಸುತ್ತಿದ್ದ ಟಾಟಾ ಏಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಮೂವರು ಮೃತಪಟ್ಟ ಘಟನೆ ಹರಪನಹಳ್ಳಿ ಅಗ್ನಿಶಾಮಕ ಠಾಣೆ, ಕುರಿಸಂತೆ ಮುಂಭಾಗದ ರಸ್ತೆಯಲ್ಲಿ ಜರುಗಿದೆ.

ಹೊಳಿಯಮ್ಮ (32), ದೊಡ್ಡಹಾಳು ಹನುಮಂತಪ್ಪ (46) ಹಾಗೂ ಲಕ್ಷ್ಮವ್ವ (42) ಮೃತಪಟ್ಟವರು. ಹರಿಹರ ತಾಲ್ಲೂಕಿನ ಹೊಟ್ಟಿಗೇನಹಳ್ಳಿ ಗ್ರಾಮದಿಂದ ಟ್ರ್ಯಾಕ್ಟರ್‌ನಲ್ಲಿ ಕುಟುಂಬ ಸಮೇತ ಕೊಟ್ಟೂರು ಗುರುಬಸವೇಶ್ವರ ದೇವಸ್ಥಾನದಲ್ಲಿ ಜವಳ ಕಾರ್ಯಕ್ರಮಕ್ಕೆ ತೆರಳುತ್ತಿದ್ದರು.

ಮಾರ್ಗಮಧ್ಯೆ ರಸ್ತೆಯ ಎಡ ಭಾಗ ಟ್ರ್ಯಾಕ್ಟರ್ ನಿಲ್ಲಿಸಿದ್ದಾಗ ಹರಪನಹಳ್ಳಿ ಯಿಂದ ಸ್ಟೇಷನರಿ ಸಾಮಾನು ತೆಗೆದುಕೊಂಡು ಹೋಗುತ್ತಿದ್ದ ಟಾಟಾ ಏಸ್ ವಾಹನ ಹಿಂದಿನಿಂದ ಟ್ರ್ಯಾಕ್ಟರ್‌ಗೆ ಡಿಕ್ಕಿ ಹೊಡೆದಿದೆ.

ಈ ವೇಳೆ ಹೊಳಿಯಮ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದ ಪೊಲಿಸರು ಕೂಡಲೇ ಹನುಮಂತಪ್ಪನನ್ನು ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಿದರು. ಚಿಕಿತ್ಸೆ ಫಲಕಾರಿಯಾಗದೆ ಸಾವನಪ್ಪಿದ್ದರೆ, ತೀವ್ರವಾಗಿ ಗಾಯಗೊಂಡಿದ್ದ ಇನ್ನೋರ್ವ ಮಹಿಳೆ ಲಕ್ಷ್ಮವ್ವ ಇಂದು ಬೆಳಿಗ್ಗೆ ಮೃತಪಟ್ಟಿದ್ದಾರೆ. ಐದು ಜನರು ಗಾಯಗೊಂಡಿದ್ದಾರೆ. ಚಾಲಕ ತಲೆಮರೆಸಿಕೊಂಡಿದ್ದಾರೆ. ಈ ಕುರಿತು ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಗರದಲ್ಲಿಂದು ವೇಷಭೂಷಣ ಸ್ಪರ್ಧೆ, ನಾಳೆ ರಂಗೋಲಿ ಸ್ಪರ್ಧೆ

ಶ್ರೀ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ ಶಿವಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10.30 ಕ್ಕೆ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಅಂಬಾಭವಾನಿ ಕಲ್ಯಾಣ ಮಂಟಪದಲ್ಲಿ ವೇಷಭೂಷಣ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ ಮತ್ತು ನಾಳೆ ದಿನಾಂಕ 17 ರಂದು ಮಧ್ಯಾಹ್ನ 3.30 ಕ್ಕೆ ಶಿವಾಜಿ ಸರ್ಕಲ್‌ನಲ್ಲಿರುವ ದುರ್ಗಾಂಬಿಕಾ ದೇವಸ್ಥಾನದಲ್ಲಿ ರಂಗೋಲಿ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ವಿವರಗಳಿಗೆ ಗೌರಬಾಯಿ (99160 09666), ಅನುಸೂಯಬಾಯಿ ಜಾಧವ್ (82170 45735), ಪದ್ಮ ಜಾಧವ್ (76762 58628), ಚೇತನ ಶಿವಕುಮಾರ್ (97312 89333), ನಾಗರತ್ನ ಕಾಟೆ (97318 23444) ಅವರುಗಳನ್ನು ಸಂಪರ್ಕಿಸಬಹುದು.

# ರಾಣೇಬೆನ್ನೂರು : ಪಕ್ಷ ರಾಜಕೀಯ ಚುನಾವಣೆಯಲ್ಲಿರಲಿ, ಅಭಿವೃದ್ಧಿಯಲ್ಲಿ ಅಲ್ಲ



ರಾಣೇಬೆನ್ನೂರು, ಫೆ.15- ಅಭಿವೃದ್ಧಿಯಲ್ಲಿ ರಾಜಕಾರಣವಿಲ್ಲ. ಎಲ್ಲರೂ ಪಕ್ಷ ಮರೆತು ಒಟ್ಟಾಗಿ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ನಗರಸಭೆ ಸದಸ್ಯರಿಗೆ ತಮ್ಮ ವಿಭಾಗದ ಚಿಂತನೆ ಇದ್ದರೆ, ನಮಗೆ ನಮ್ಮ ಕ್ಷೇತ್ರದ ಅಭಿವೃದ್ಧಿಯ ಚಿಂತನೆ ಇರುತ್ತದೆ. ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು ಎಂದು ಸಚಿವ ಆರ್. ಶಂಕರ್ ಹಾಗೂ ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ನಗರದಲ್ಲಿ ಎಸ್ಎಫ್‌ಸಿ ಅನುದಾನದಲ್ಲಿ ಹೊಲಿಗೆ ಯಂತ್ರ ಹಾಗೂ ಶೇ. 5 ರ ಅನುದಾನದಲ್ಲಿ ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಿಸಿ ಅವರುಗಳು ಮಾತನಾಡಿದರು.

ಹೊರಗಿನ ಅನೇಕ ರಾಜ್ಯಗಳ ಸರ್ಕಾರಿ ನೌಕರರಿಗೆ ಸಂಬಳ ಕೊಡದಂತಹ ಪರಿಸ್ಥಿತಿ ಇತ್ತು. ಕೋವಿಡ್ ಹಾಗೂ ಮಹಾ ಮಳೆಯ ಈ ಸಂಕಷ್ಟದ ಪರಿಸ್ಥಿತಿಯಲ್ಲೂ ಸಹ ನಮ್ಮ ಸರ್ಕಾರ ನೌಕರರ ಹಿತ ಹಾಗೂ ಅಭಿವೃದ್ಧಿಯ ಮೂಲಕ ಜನರ ಹಿತ ಬಯಸಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಜಲಜೀವ ಯೋಜನೆ ಅನ್ವಯ ನಮ್ಮ ಪ್ರಧಾನಮಂತ್ರಿಗಳ ಆಶಯದಂತೆ ದೇಶದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಸರಬರಾಜು ಆಗಬೇಕು ಎನ್ನುವ ವಿಚಾರದಲ್ಲಿ ವಿಶೇಷ ಆಸಕ್ತಿ ವಹಿಸಿರುವ ಮುಖ್ಯಮಂತ್ರಿಗಳು, ತಮ್ಮ ಅಧಿಕಾರವಧಿಯೊಳಗೆ ಅಂದರೆ 2023 ರೊಳಗೆ ರಾಜ್ಯದ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ಕೊಡಲು ನಿರ್ಣಯಿಸಿದ್ದಾರೆ ಎಂದರು.

50 ಲಕ್ಷದ ವಿಶೇಷ ಅನುದಾನದಲ್ಲಿ ನಗರದ ವಿವಿಧೆಡೆ 10 ಭಾಗಗಳಲ್ಲಿ ಶುದ್ಧ ಕುಡಿಯುವ ನೀರು ಘಟಕಗಳ ನ್ನು ನಿರ್ಮಿಸಲಾಗಿದೆ. ಒಂದನ್ನು ಹೊರತುಪಡಿಸಿ ಒಂಭತ್ತು ಕಾಮಗಾರಿಗಳು ಮುಗಿದಿದ್ದು ಇಂದು ಉದ್ಘಾಟಿಸಲಾಗಿದೆ. ಆ ಘಟಕವನ್ನು ಸಹ ಶೀಘ್ರವೇ ಉದ್ಘಾಟಿಸಲಾಗುವುದು ಎಂದು ಶಾಸಕರು, ಸಚಿವರು ವಿವರಿಸಿದರು.

ಕಾರ್ಯಕ್ರಮದಲ್ಲಿ ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಉಪಾಧ್ಯಕ್ಷೆ ಕಸ್ತೂರಿ ಚಿಕ್ಕಬಿದರಿ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಸದಸ್ಯ ಮಲ್ಲಣ್ಣ ಅಂಗಡಿ, ಪೌರಾಯುಕ್ತ ಡಾ. ಮಹಾಂತೇಶ್ ಮತ್ತಿತರರು ಪಾಲ್ಗೊಂಡಿದ್ದರು.

### ಕೆಲಸ ಮಾಡಲು ಆಗದವರು ಬೇರೆ ಕಡೆ ಹೋಗಿಬಿಡಿ

ದಶಕಗಳಿಂದ ಇಲ್ಲಿರುವ ನೌಕರರ ಬಗ್ಗೆ ನನಗೆ ಪ್ರತಿದಿನ ದೂರುಗಳು ಬರುತ್ತಿವೆ. ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಗೌರವ ಕೊಟ್ಟು ಅವರ ಕೆಲಸ ಮಾಡಿಕೊಡಿ. ಮಾಡಲು ಆಗದವರು ಗಂಟು ಮೂಟೆ ಕಟ್ಟಿಕೊಂಡು ಬೇರೆ ಕಡೆ ಹೋಗಿಬಿಡಿ ಎಂದು ಸಚಿವ ಶಂಕರ್ ನಗರಸಭೆ ನೌಕರರಿಗೆ ಕಡಕ್ ಆಗಿ ಸೂಚಿಸಿದರು.

### ಕುರುಬಗೇರಿಗೆ ಶುದ್ಧ ನೀರು ಬೇಡವೆ?

ಸರ್ಕಾರದ ನಿಯಮದಂತೆ ಎಸ್.ಎಫ್.ಸಿ ಯ 5 ಕೋಟಿ ಅನುದಾನದಲ್ಲಿ ನಗರದ ಎಲ್ಲ ವಿಭಾಗಗಳಲ್ಲೂ ಅವಶ್ಯವಿರುವ ತುರ್ತು ಕಾಮಗಾರಿಗಳನ್ನು ಕೈಗೊಳ್ಳಬೇಕು. ಆದರೆ ಶಾಸಕರು 5 ಕೋಟಿಯ ಈ ಅನುದಾನವನ್ನು ಎಲ್ಲ ವಿಭಾಗಗಳಿಗೆ ಕೊಡದೇ ತಮ್ಮ ಜಾತಿಯ ಸದಸ್ಯರೇ ಆಯ್ಕೆಯಾಗಿರುವ ಸಂಖ್ಯೆ 10,11 ಹಾಗೂ 25 ನೇ ವಿಭಾಗಗಳಿಗೆ ಹಂಚಿಕೆ ಮಾಡಿದ್ದಾರೆ ಎಂದು ಕಾಂಗ್ರೆಸ್ ಸದಸ್ಯ ಲಿಂಗರಾಜ ಕೋಡಿಹಳ್ಳಿ ಆರೋಪಿಸಿದ್ದಾರೆ.

ನಗರದ 9 ಭಾಗಗಳಲ್ಲಿ ಶುದ್ಧ ಕುಡಿಯುವ ನೀರು ಘಟಕ ಪ್ರಾರಂಭಿಸಿ, ಕುರುಬರು, ಸಾಧು ಲಿಂಗಾಯತರು, ನೇಕಾರರು, ಹರಿಜನರು ಇರುವ ಕುರುಬಗೇರಿಯಲ್ಲಿನ ಒಂದು ಘಟಕವನ್ನು ಏಕೆ ತಡೆದಿದ್ದಾರೆ ? ಈ ಜನರು ಒಳ್ಳೆಯ ನೀರು ಕುಡಿಯಬಾರದೆ? ಎಂದು ನಗರ ಸಭೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಪ್ರಶ್ನಿಸಿದ್ದಾರೆ.


# ಮೈಲಾರ ಜಾತ್ರೆಗೆ ನಿಷೇಧ : ಭಕ್ತರ ಕಳವಳ

ಹಡಗಲಿ ತಾಲ್ಲೂಕಿನ ಪ್ರಸಿದ್ಧ ಶ್ರೀ ಮೈಲಾರ ಲಿಂಗೇಶ್ವರ ಜಾತ್ರೆ ಹಾಗೂ ಪಕ್ಕದ ಕುರುವತ್ತಿಯ ಶ್ರೀ ಮಲ್ಲಿಕಾರ್ಜುನ ಮತ್ತು ಶ್ರೀ ಬಸವೇಶ್ವರ ಸ್ವಾಮಿಯ ಜಾತ್ರೆಯನ್ನು ಬಳ್ಳಾರಿ ಜಿಲ್ಲಾಧಿಕಾರಿಗಳು ನಿಷೇಧಿಸಿ, ಆದೇಶವನ್ನು ಹೊರಡಿಸಿದ್ದು, ಲಕ್ಷಾಂತರ ಭಕ್ತರು ಕಳವಳಗೊಂಡಿದ್ದಾರೆ.


ಧಾರ್ಮಿಕ ಪರಂಪರೆಯ ಕ್ಷೇತ್ರವಾದ ಮೈಲಾರ ಜಾತ್ರೆಯಲ್ಲಿ ಇದುವರೆಗೂ ಪ್ರಾಣಿ ಹಿಂಸೆಗೆ ಅವಕಾಶವಿಲ್ಲ. ಶತಮಾನಗಳಿಂ ದಲೂ ನಡೆದುಕೊಂಡು ಬಂದ ಪರಂಪರೆ ಯಂತೆ ಸಂಪ್ರದಾಯ ಬದ್ಧವಾಗಿ ಜರುಗುತ್ತಾ ಬರುತ್ತಿರುವ ಈ ಎರಡೂ ಸುಕ್ಷೇತ್ರಗಳು ತಮ್ಮದೇಯಾದ ಭಕ್ತ ವರ್ಗವನ್ನು ಹೊಂದಿವೆ. ಅಲ್ಲದೇ ಮೈಲಾರಲಿಂಗಸ್ವಾಮಿಯ ವಾರ್ಷಿಕ ಕಾರಣಿಕ ನುಡಿಯು ಇಡೀ ದೇಶದ ಗಮನವನ್ನು ಸೆಳೆಯುವಂತಹ ಧಾರ್ಮಿಕ ಪ್ರಕ್ರಿಯೆಯಾಗಿದೆ

ಪ್ರತಿ ವರ್ಷದ ಭಾರತ ಹುಣ್ಣಿಮೆಯ ಸಂದರ್ಭಕ್ಕೆ ಸರಿಯಾಗಿ ಬರುವ ಜಾತ್ರೆ ಕನಿಷ್ಟ ಒಂದು ವಾರ ಕಾಲ ನಡೆಯುತ್ತದೆ. ಅದಕ್ಕಾಗಿ ರಾಜ್ಯ, ಹೊರರಾಜ್ಯಗಳಿಂದ ಭಾಷಾತೀತ, ಜಾತ್ಯತೀತರಾಗಿ ಆಗಮಿಸುವ ಅಪಾರ ಭಕ್ತ ವೃಂದಕ್ಕೆ ಸರಕಾರದ ಈ ನಿಷೇಧದ ಕ್ರಮ ಇರಿಸುಮುರುಸನ್ನುಂಟು ಮಾಡಿದೆ. ಕಾರಣ ಕೊರೊನಾ. 1904ರಲ್ಲಿ ಪ್ಲೇಗ್ ರೋಗದ ಕಾರಣ ಜಾತ್ರೆ ನಿಷೇಧವಾಗಿತ್ತು! ಈ ಬಾರಿ ಲಕ್ಷಾಂತರ ಜನರು ಜಾತ್ರೆಗೆ ಆಗಮಿಸುವ ಕಾರಣಕ್ಕೆ ಅವರೆಲ್ಲರನ್ನು ಕೋವಿಡ್ ಮಾರ್ಗ ಸೂಚಿ ಅನ್ವಯ ನಿಯಂತ್ರಿಸುವುದು ಕಷ್ಟಸಾಧ್ಯ ಎಂಬ ನೆಪವೊಡ್ಡಿ ಬಳ್ಳಾರಿ ಜಿಲ್ಲಾಧಿಕಾರಿ ಯವರು ನಿಷೇಧಿಸಿದ್ದಾರೆ.

ಜಾತ್ರೆಯನ್ನು ಆಚರಿಸುವ ಸಂಬಂಧ ಮೈಲಾರ ಲಿಂಗಸ್ವಾಮಿಯ ವಂಶಪಾರಂಪರ್ಯ ಧರ್ಮಕರ್ತರಾದ ಶ್ರೀ ಗುರುವೆಂಕಪ್ಪಯ್ಯ ಒಡೆಯರ್ ಇತ್ತೀಚಿಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಮಾಡಿದ್ದರು. ಈಗ ಕೋವಿಡ್ ನೆಪದಿಂದ ಜಾತ್ರೆಯನ್ನು ನಿಷೇಧಿಸಲಾಗಿದೆ. ಆದರೆ ಪರಂಪರೆಯ ವಾರಸುದಾರ ರಾಗಿರುವ ಲಕ್ಷಾಂತರ ಭಕ್ತ ಪ್ರವಾಹವನ್ನು ಜಿಲ್ಲಾಡಳಿತವಲ್ಲ, ಸರ್ಕಾರದಿಂದಲೂ ನಿಯಂತ್ರಿಸಲಾಗದು. ಧಾರ್ಮಿಕವಾಗಿ ನೆಲೆಯೂರಿರುವ ಭಕ್ತರು ತಮ್ಮ ನಂಬಿಕೆಗೆ ಅಪಚಾರವಾದರೆ ಅಥವಾ ಅಂತಹ ಪ್ರಯತ್ನ ನಡೆದಲ್ಲಿ ಸಹಿಸಲಾರರು.



ಅಷ್ಟಕ್ಕೂ ಸರಕಾರ ತೆಗೆದು ಕೊಂಡಿರುವ ಈ ಜಾತ್ರಾ ನಿಷೇಧದ ಬಗ್ಗೆ ಅವರಾರು ಯೋಚಿಸುವುದಿಲ್ಲ. ಮುನ್ನುಗ್ಗುತ್ತಾರೆ. ಇತ್ತೀಚಿಗೆ ನಡೆದ ಮುದ್ದಿಹುಣ್ಣಿಮೆಯ ಸಂದರ್ಭದಲ್ಲಿ ಮೈಲಾರಕ್ಕೆ ಬಂದು ಭಕ್ತಿಪೂರ್ವಕ ಸೇವೆಗೈದದ್ದು ಸುಮಾರು 2ಲಕ್ಷದಷ್ಟು ಭಕ್ತರು. ಸರ್ಕಾರ ಈ ಕ್ರಮವನ್ನು ತೆಗೆದುಕೊಂಡಿರುವುದು ಮೇಲ್ನೋಟಕ್ಕೆ ಒಪ್ಪಿಕೊಳ್ಳ ಬಹುದಾಗಿದ್ದರೂ, ಎಂದಿನಂತೆ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಭಕ್ತರು ಬಂದೇ ಬರುತ್ತಾರೆ. ಆದರೆ ಕೊಂಚ ವಾಹನ ದಟ್ಟನೆ ಕಡಿಮೆಯಾದೀತು. ಅದನ್ನು ಬಿಟ್ಟರೆ ಜಾತ್ರೆ ಎಂದಿನಂತೆ ನಡೆಯುತ್ತದೆ ಎಂಬ ಭಾವನೆ ಈ ಭಾಗದ ಜನರದ್ದು.



ಆದರೆ ಜಿಲ್ಲಾಧಿಕಾರಿಗಳ ಆದೇಶದಂತೆ ದೇವಸ್ಥಾನದ ಒಳಾಂಗಣದಲ್ಲಿ ಎಂದಿನಂತೆ ಧಾರ್ಮಿಕ ವಿಧಿ ವಿಧಾನಗಳು ಜರುಗುತ್ತವೆ. ಆದರೆ ಸಾರ್ವಜನಿಕ ಭಕ್ತರಿಗೆ ಪ್ರವೇಶವಿರುವುದಿಲ್ಲ ಎಂದು ಹೇಳಿದೆ. ಅಷ್ಟಕ್ಕೂ ಸದರಿ ಜಾತ್ರೆಯ ಕೇಂದ್ರಬಿಂದು ವಾದ ಕಾರಣಿಕ ಪೂರ್ವದಿಕ್ಕಿನಲ್ಲಿರುವ ಡೆಂಕನಮರಡಿಯಲ್ಲಿ ಜರುಗುತ್ತದೆ. ಇಡೀ ಜಾತ್ರೆಗೆ ಆಗಮಿಸುವ ಸುಮಾರು 10 ಲಕ್ಷ ಜನರ ಪೈಕಿ ಕನಿಷ್ಠ 8 ಲಕ್ಷ ಜನ ಜಂಗುಳಿ ಡೆಂಕನ ಮರಡಿಯಲ್ಲಿ ಜಮಾವಣೆಯಾ ಗುತ್ತಿತ್ತು. ಅಲ್ಲಿಗೂ ಭಕ್ತರ ಆಗಮನವನ್ನು ನಿಷೇಧಿಸಿದ್ದು, ಸಂಪ್ರದಾಯದಂತೆ ಕಾರಣಿಕವನ್ನು ಗೊರವಪ್ಪ ನುಡಿಯುತ್ತಾನೆಂದು ಹೇಳಲಾಗುತ್ತಿದೆ. ಅದು ಮುಂದೆ ಈ ನಾಡಿಗೆ ಯಾವ ಕೇಡನ್ನು ತಂದೊಡ್ಡುವುದೋ?ಎಂಬ ಆತಂಕವನ್ನು ಮೈಲಾರಲಿಂಗೇಶ್ವರನ ಭಕ್ತರು ವ್ಯಕ್ತಪಡಿಸುತ್ತಿದ್ದಾರೆ.

**ಆದಾಯಕ್ಕೂ ಕೊಕ್:** ಮೈಲಾರ ಜಾತ್ರೆಗೆ ಆಗಮಿಸುವ ಭಕ್ತರು ಸಲ್ಲಿಸುವ ಕಾಣಿಕೆ ಅಪಾರ. ಹಣ, ಚಿನ್ನ, ಬೆಳ್ಳಿ, ದವಸ-ಧಾನ್ಯವನ್ನು ದಾನವಾಗಿ ಕೊಡುತ್ತಾರೆ. ಇದ ರಿಂದ ಮುಜರಾಯಿ ಇಲಾಖೆಯ ಹಿಂದೂ ಧಾರ್ಮಿಕ ದತ್ತಿ ಮತ್ತು ಧರ್ಮದಾಯಿ ಸೇವೆಗಳಿಗೆ ಭಯಂಕರ ನಷ್ಟ ಉಂಟಾಗುತ್ತದೆ. ಈ ಜಾತ್ರೆಯನ್ನು ನಂಬಿಕೊಂಡು ಬಂದು ವಿವಿಧ ವ್ಯಾಪಾರ ವಹಿವಾಟನ್ನು ನಡೆಸುತ್ತಿದ್ದರು. ಅಲ್ಲದೇ ಮೈಲಾರ ಗ್ರಾಮಪಂಚಾಯಿತಿಯ ಆರ್ಥಿಕಾಭಿವೃದ್ಧಿಗೂ ಪೆಟ್ಟು ಬೀಳಲಿದೆ. ಜೊತೆಗೆ ರಾಜ್ಯ ಸಾರಿಗೆಗೂ ನಷ್ಟ ಉಂಟಾಗುತ್ತದೆ.

**- ಎಸ್. ನಿಂಗರಾಜ್**
ಹೂವಿನ ಹಡಗಲಿ.

# ಪುಲ್ವಾಮಾ ಹುತಾತ್ಮರ ಸ್ಮರಣಾರ್ಥ ನಿವೃತ್ತ ಯೋಧರಿಗೆ ಸನ್ಮಾನ



ಹರಿಹರ, ಫೆ.15- ನಗರದಲ್ಲಿಂದು ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರ ಸ್ಮರಣಾರ್ಥವಾಗಿ ಸೈನಿಕರ ಅಭಿಮಾನಿಗಳ ಬಳಗ, ಎನ್.ಹೆಚ್. ಶ್ರೀನಿವಾಸ್ ಸ್ನೇಹ ಬಳಗ, ಕ್ಷಿಪ್ರ ಸ್ಟುಡಿಯೋಸ್, ಇನ್‌ಸ್ಪೈರ್ ಅಸೋಸಿಯೇಷನ್, ಲೈಫ್‌ಲೈನ್ ಬ್ಲಡ್ ಬ್ಯಾಂಕ್ ದಾವಣಗೆರೆ ಹಾಗೂ ಹರಿಹರ ತಾಲ್ಲೂಕು ಆರೋಗ್ಯ ಇಲಾಖೆ ಸಹಯೋಗದೊಂದಿಗೆ ರಕ್ತದಾನ ಶಿಬಿರ ಹಾಗೂ ನಿವೃತ್ತ ಯೋಧರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಉಪವಿಭಾಗಧಿಕಾರಿ ಮಮತಾ ಹೊಸಗೌಡ್ರು, ಶಾಸಕ ಎಸ್. ರಾಮಪ್ಪ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಸಿಪಿಐ ಸತೀಶ್ ಕುಮಾರ್, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಎನ್.ಹೆಚ್. ಶ್ರೀನಿವಾಸ್ ನಂದಿಗಾವಿ, ಉಮ್ಮಣ್ಣ, ಸುಚೇತ್ ಹಾಗೂ ನಿವೃತ್ತ ಸೈನಿಕರು ಹಾಜರಿದ್ದರು.

# ಹುಲಿಕಟ್ಟೆ ಗ್ರಾ. ಪಂ.ಗೆ ಅಧ್ಯಕ್ಷರಾಗಿ ಜಯಮ್ಮ, ಉಪಾಧ್ಯಕ್ಷರಾಗಿ ರೇಖಾ



ದಾವಣಗೆರೆ, ಫೆ.15- ತಾಲ್ಲೂಕಿನ ಹುಲಿಕಟ್ಟೆ ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿ ಕೆರೆಯಾಗಳಹಳ್ಳಿಯ ಜಯ್ಯಮ್ಮ ದಾದಾಪ್ಪರ ಹನುಮಪ್ಪ ಮತ್ತು ಉಪಾಧ್ಯಕ್ಷರಾಗಿ ಅದೇ ಗ್ರಾಮದ ರೇಖಾ ಬಿ.ಜಿ. ಬಸವರಾಜ್ ಆಯ್ಕೆಯಾಗಿದ್ದಾರೆ.

ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಯಮ್ಮ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಉಪಾಧ್ಯಕ್ಷ ಸ್ಥಾನಕ್ಕೆ ರೇಖಾ ಬಿ.ಜಿ ಅವಿರೋಧವಾಗಿ ನೇಮಕಗೊಂಡಿದ್ದಾರೆ ಎಂದು ಗ್ರಾಪಂ ಪಿಡಿಓ ಎನ್.ಎಸ್. ಲೋಹಿತ್ ಕುಮಾರ್ ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಸೇವಾಲಾಲ್ ಜಯಂತಿ



ಮಲೇಬೆನ್ನೂರು, ಫೆ.15- ಇಲ್ಲಿನ ಪುರಸಭೆ ಕಚೇರಿಯಲ್ಲಿ ಸಂತ ಶ್ರೀ ಸೇವಾಲಾಲ್ ಮಹಾರಾಜ್ ಅವರ 282ನೇ ಜಯಂತಿಯನ್ನು ಆಚರಿಸಲಾಯಿತು. ಸೇವಾಲಾಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಪೂಜೆ ಸಲ್ಲಿಸಿದ ಪ್ರಭಾರ ಮುಖ್ಯಾಧಿಕಾರಿ ಉದಯಕುಮಾರ್ ಎನ್.ತಳವಾರ ಅವರು ಸೇವಾಲಾಲ್ ಕುರಿತು ಮಾತನಾಡಿದರು.

ಪುರಸಭೆ ಅಧ್ಯಕ್ಷರಾದ ಶ್ರೀಮತಿ ನಾಹೀದ ಅಂಜುಂ, ಉಪಾಧ್ಯಕ್ಷೆ ಶ್ರೀಮತಿ ಅಂಜಿನಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಂತೇಶ್ ಸ್ವಾಮಿ, ಸದಸ್ಯರಾದ ಎ.ಆರೀಫ್ ಅಲಿ ಯುಸೂಫ್, ಮಾಸಣಗಿ ಶೇಖರಪ್ಪ, ಭೋವಿ ಕುಮಾರ್, ಫಕ್ರುದ್ದೀನ್, ಭೋವಿ ಶಿವು, ಕಣ್ಣಾಳ್ ರವಿಕುಮಾರ್ ಮತ್ತಿತರರು ಭಾಗವಹಿಸಿದ್ದರು.



### ರಾಜೇಂದ್ರ ಬಡಾವಣೆಯಲ್ಲಿ ನೂತನ ದೇವಸ್ಥಾನ

## ಸಂಕಲ್ಪ ಸಿದ್ಧಿ ವಿನಾಯಕ-ಆಂಜನೇಯ ಮೂರ್ತಿ ಪ್ರತಿಷ್ಠಾಪನೆ ವೈಭವ





ದಾವಣಗೆರೆ, ಫೆ.15- ಇಲ್ಲಿನ ಡಿಸಿಎಂ ಟೌನ್ ಶಿಪ್ ಸಮೀಪದ ಶಕ್ತಿ ನಗರ ಬಳಿಯ ರಾಜೇಂದ್ರ ಬಡಾವಣೆಯಲ್ಲಿ ಸಂಕಲ್ಪ ಸಿದ್ಧಿ ವಿನಾಯಕ ನಾಗರಿಕ ಸಮಿತಿ ವತಿಯಿಂದ ಶ್ರೀ ಸಂಕಲ್ಪ ಸಿದ್ಧಿ ವಿನಾಯಕ ಮತ್ತು ಶ್ರೀ ಅಭಯ ಹಸ್ತ ಆಂಜನೇಯ ಸ್ವಾಮಿ ನೂತನ ದೇವಸ್ಥಾನದಲ್ಲಿ ದೇವರುಗಳ ಮೂರ್ತಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಇಂದು ನೆರವೇರಿತು.

ಶ್ರೀ ಸಂಕಲ್ಪ ಸಿದ್ಧಿ ವಿನಾಯಕ ಮತ್ತು ಶ್ರೀ ಅಭಯ ಹಸ್ತ ಆಂಜನೇಯ ಸ್ವಾಮಿ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ, ಗಣಪತಿ ದೇವರ ಪ್ರತಿಷ್ಠಾ ಹೋಮ, ಗಣ ಹೋಮ, ಪಂಚಾಮೃತ ಅಭಿಷೇಕ, ಜೀವಕಳಶ ಪೂಜೆ, ಪ್ರಾಣ ಪ್ರತಿಷ್ಠೆ, ಕಲಶಾಭಿಷೇಕ, ಬ್ರಹ್ಮಕುಂಭಾಭಿಷೇಕ, ಮಹಾಪೂಜೆ ವಿಜೃಂಭಣೆಯಿಂದ ಜರುಗಿತು. ಅನ್ನಸಂತರ್ಪಣೆ ಸಹ ಏರ್ಪಡಿಸಲಾಗಿತ್ತು.

## ಸರ್ಕಾರಿ ನೌಕರರ ಕ್ರೀಡಾಕೂಟ ಮಾಲತೇಶ ತಳವಾರ್ ರಾಜ್ಯಮಟ್ಟಕ್ಕೆ



**ಹರಪನಹಳ್ಳಿ**

ಹರಪನಹಳ್ಳಿ, ಫೆ. 15- ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಬಳ್ಳಾರಿ) ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಮೊನ್ನೆ ನಡೆದ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಪವರ್ ಲಿಫ್ಟಿಂಗ್ ಮತ್ತು ವೇಟ್ ಲಿಫ್ಟಿಂಗ್ ಹಾಗೂ ಕುಸ್ತಿ ಸ್ಪರ್ಧೆಗಳಲ್ಲಿ ದ್ವಿತೀಯ ಸ್ಥಾನ ಪಡೆದುಕೊಳ್ಳುವ ಮೂಲಕ ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಮಾಲತೇಶ ತಳವಾರ್ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ರಾಜ್ಯಮಟ್ಟದಲ್ಲಿ ಬಳ್ಳಾರಿ ಜಿಲ್ಲೆಯನ್ನು ಪ್ರತಿನಿಧಿಸಿ ವಿಜೇತರಾಗಲಿ ಎಂದು ಉಪನಿರ್ದೇಶಕ ರಾಜಪ್ಪ, ಸಹಾಯಕ ನಿರ್ದೇಶಕ ಆನಂದ ಡೊಳ್ಳಿನ, ಇಲಾಖೆಯ ಸಿಬ್ಬಂದಿ, ಸ್ನೇಹಿತರು ಅಭಿನಂದಿಸಿದ್ದಾರೆ.

# ನವೋಲ್ಲಾಸ ತರುವ ನವ ಕಾಲದ ನವ ಆಲೋಚನೆಗಳು...


ನವ ಆಲೋಚನೆಗಳ ಕಾಲವೆಂದರೆ ಇಂದಿನ ಆಧುನಿಕ ಕಾಲ ಎನ್ನಬಹುದು. ಎಲ್ಲ ಜನರು ಇಂದಿನ ನವ ಕಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ. ಹೊಂದಾಣಿಕೆ ಮಾಡಿಕೊಂಡು ಬಾಳುತ್ತಿದ್ದಾರೆ.

ಜೀವ ವಿಕಾಸ ಸಿದ್ಧಾಂತದ ಪಿತಾಮಹ "ಚಾರ್ಲ್ಸ್ ಡಾರ್ವಿನ್" ಅವರು ಬದುಕಿನ ಬಗ್ಗೆ ಒಂದು ಒಳ್ಳೆಯ ನುಡಿಮುತ್ತಿನ ಸಾರ ವನ್ನು ಹೇಳಿದ್ದಾರೆ. ಅದೇನೆಂದರೆ "ಬದುಕುಳಿ ಯುವುದು ಅತ್ಯಂತ ಬಲಿಷ್ಠ ಪ್ರಾಣಿಯೂ ಅಲ್ಲ, ಅತ್ಯಂತ ಬುದ್ಧಿವಂತ ಪ್ರಾಣಿಯೂ ಅಲ್ಲ. ಬದಲಿಗೆ ಬದಲಾವಣೆಗೆ ಒಗ್ಗಿಕೊಳ್ಳುವ ಶಕ್ತಿ ಯುಳ್ಳ ಪ್ರಾಣಿಗಳು". ಈ ಸಾರ ನಮ್ಮ ಆಧು ನಿಕ ಕಾಲದಲ್ಲಿ ನೋಡಿದ್ದೇವೆ. ನಾವು ಕೂಡ ಅನುಭವಿಸಿದ್ದೇವೆ. ನಾವು ಈಗಿನ ಕಾಲವನ್ನು ನವ ಕಾಲ ಎಂದು ಕರೆಯಲು ಮುಖ್ಯ ಕಾರಣ ಈಗಿನ ಜಗತ್ತಿನ ಜನರ ನವ ಆಲೋಚನೆಗಳಿಂದ.

ಈಗಿನ ತಂತ್ರಜ್ಞಾನ, ಔದ್ಯಮಿಕ ಮತ್ತು ಆರ್ಥಿಕತೆಯ ಜಗತ್ತನ್ನು ನೋಡಿ ಅದನ್ನು ಅರ್ಥ ಮಾಡಿಕೊಂಡು ಮುಂದಿನ ಜಗತ್ತು ಹೇಗೆ ಇರಬಹುದು. ಅದು ಹೀಗೆಯೇ ಇರುತ್ತದೆಂದು ಈಗಿನ ಕೋಟ್ಯಾಧೀಶರು, ಉತ್ತಮ ಕಂಪನಿಯ ಸಿಇಓಗಳು ಹಾಗೆಯೇ ಅವರ ನವ ಆಲೋಚನೆಗಳನ್ನು ಹೂಡಿದ್ದಾರೆ.

ಉದಾಹರಣೆಗೆ ನಾನು ಜಗತ್ತಿಗಾಗಿ ಮಾಡಬಲ್ಲೆ ಎಂದು ಮ್ಯಾನುಫ್ಯಾಕ್ಚರಿಂಗ್ ಸಂಸ್ಥೆ ಹೇಳಿದರೆ. ನಾನು ಜಗತ್ತಿಗಾಗಿ ಮಾರ ಬಲ್ಲೆ ಎಂದು ಇನ್ ಮೊಬಿ ಕಂಪನಿಯನ್ನು ಸೃಷ್ಟಿಸಿದ ಮಹಾಶಯ ಹೇಳುತ್ತಾನೆ. ಇದು ಈಗಿನ ಜನರ ಆಲೋಚನೆ.

ನಾನು ಹಲವಾರು ಜನರನ್ನು ಟಿವಿಯಲ್ಲಿ ಅವರ ಜೀವನ ಚರಿತ್ರೆ ನೋಡಿದ್ದೇನೆ. ಅನೇಕರು ತಮ್ಮ ಕಷ್ಟಗಳನ್ನೆದುರಿಸಿ ಯಶಸ್ಸು ಕಂಡಿದ್ದಾರೆ. ಆಗ ಕೆಲಸಕ್ಕಾಗಿ ಅಲೆದಾಡುವ ಯುವಕರಿದ್ದರು. ಈಗ ಕೆಲಸಕ್ಕಾಗಿ ಅಲೆಯುವ ಬದಲಾಗಿ, ಕೆಲಸಗಳನ್ನು ಸೃಷ್ಟಿಸುತ್ತೇವೆನ್ನುವ ಯುವಕರಿದ್ದಾರೆ.



ಈಗಿನ ಕಾಲದಲ್ಲಿ ಆಲೋಚನೆ ಬಹಳ ಬದಲಾಗಿದೆ. ತಂತ್ರಜ್ಞಾನದಲ್ಲಿ ತಮಗೆ ಗೊತ್ತಿರುವ ವಿಷಯದಲ್ಲಿ ಉದ್ಯಮವನ್ನು ಸ್ಥಾಪಿಸಿ, ಅದರ ಆನ್ಲೈನ್ ಸ್ವರೂಪವನ್ನು ಯಾವ ರೀತಿ ಕಟ್ಟುತ್ತಾರೆಂದರೆ ಬೇರೆಯವರು ತಮ್ಮ ಉದ್ಯಮವನ್ನು ಬೆಳೆಸಲು ನಮ್ಮ ಉದ್ಯಮವನ್ನು ಬಳಸಿಕೊಳ್ಳುತ್ತಾರೆ. ಅಂದರೆ ಅವರು ಮಾಡುವ ಕೆಲಸ ಯಾವುದೇ ಆದರೂ ಮಾಹಿತಿ ತಂತ್ರಜ್ಞಾನದ ಬೆನ್ನೆಲುಬಿರದಿದ್ದರೆ ಆ ಕೆಲಸ ಇತರೆ ಕೆಲಸಗಳಿಗಿಂತ ಮಂಕಾಗುತ್ತದೆ.

ಈಗಿನ ತಂತ್ರಜ್ಞಾನ ಮತ್ತು ಔದ್ಯಮಿಕ ಜಗತ್ತಿನಲ್ಲಿ ತುಂಬಾ ಆಲೋಚನೆಗಳು ಬದಲಾ ಗುತ್ತಿವೆ. ಅಂದರೆ ಉದಾಹರಣೆಗೆ ಕೆಲ ವರ್ಷ ಗಳ ಕೆಳಗಿನ ಪರಿಸ್ಥಿತಿಯಲ್ಲಿ ಕ್ಯಾಬ್ ಡ್ರೈವ ರ್ಗಳು ಎಷ್ಟು ಸಂಪಾದಿಸುತ್ತಿರಬಹುದು? 10 ರಿಂದ 20 ಸಾವಿರವಿತ್ತು. ಆದರೆ ಈಗ ತಿಂಗಳಿಗೆ ಲಕ್ಷ ಗಳಿಸುತ್ತಿದ್ದಾರೆ. ಇನ್ನೊಂದು ಉದಾಹರಣೆ.. ಮುಂಚೆ ಜನರು ಉದ್ಯೋಗ ಪಡೆದರೆ ಫೋನನ್ನು ತೆಗೆದುಕೊಳ್ಳುತ್ತಿದ್ದರು. ಈಗ ತಮ್ಮ ಸ್ಮಾರ್ಟ್ ಫೋನನ್ನೇ ವೃತ್ತಿಯ ಆಧಾರವಾಗಿಸಿಕೊಂಡಿದ್ದಾರೆ. ಇದೆಲ್ಲವು ಈಗಿನ ಜನರ ನವ ಆಲೋಚನೆಗಳು ಹಾಗೂ ಅವರು ಅರ್ಥ ಮಾಡಿಕೊಂಡ ತಂತ್ರಜ್ಞಾನ ಮತ್ತು ಔದ್ಯಮಿಕ ಜೀವನ ಎನ್ನಬಹುದು.

ಇದೇ ರೀತಿ ನಾವು ಇನ್ನೊಬ್ಬ ಮಹಾಪುರುಷನ ವ್ಯಕ್ತಿತ್ವವನ್ನು, ಅವನ ಆಲೋಚನೆ ನೋಡಿದರೆ ನೀವು ಅಚ್ಚರಿಗೊಳ್ಳುತ್ತೀರಿ. ಬೇರೆಯವರಿಗೆ ಹುಚ್ಚು ಎಂದೆನಿಸುವ ಕನಸುಗಳನ್ನು ಕಂಡು ಅವುಗಳನ್ನು ನನಸು ಮಾಡುತ್ತಿದ್ದಾನೆ.

> ಜೀವ ವಿಕಾಸ ಸಿದ್ಧಾಂತ
> **"ಬದುಕುಳಿಯುವುದು ಅತ್ಯಂತ ಬಲಿಷ್ಠ ಪ್ರಾಣಿಯೂ ಅಲ್ಲ, ಅತ್ಯಂತ ಬುದ್ಧಿವಂತ ಪ್ರಾಣಿಯೂ ಅಲ್ಲ. ಬದಲಿಗೆ ಬದಲಾವಣೆಗೆ ಒಗ್ಗಿಕೊಳ್ಳುವ ಶಕ್ತಿಯುಳ್ಳ ಪ್ರಾಣಿಗಳು".**
> - ಚಾರ್ಲ್ಸ್ ಡಾರ್ವಿನ್

ಆತನ ಹೆಸರು ಇಲಾನ್ ಮಸ್ಕ್. ಈತ ದಕ್ಷಿಣ ಆಫ್ರಿಕಾದಲ್ಲಿ ಹುಟ್ಟಿ, ತನ್ನ ತಾಯ್ತಂದೆಯ ಜೊತೆಗೆ ಕೆನಡಾಗೆ ವಲಸೆ ಬಂದವನು. ಈತನಿಗೆ ತನ್ನ ತಾಯಿಯೇ ತನಗೆ ರೋಲ್ ಮಾಡೆಲ್. ತನ್ನ 9ನೇ ವಯಸ್ಸಿಗೆ ಇಡೀ ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾವನ್ನು ಓದಿ ಮುಗಿಸಿದ್ದಾನೆ. 12ನೇ ವಯಸ್ಸಿಗೆ ಕಂಪ್ಯೂಟರ್ ಕೋಡಿಂಗ್ ಬರೆದನು. ಬ್ಲಾಸ್ಟರ್ ಎನ್ನುವ ವಿಡಿಯೋ ಗೇಮ್ ಸೃಷ್ಟಿಸಿ 500 ಡಾಲರ್ಗೆ ಮಾರಾಟ ಮಾಡಿದ. ಬಾಲ್ಯದಲ್ಲಿ ಕುಸ್ತಿ, ಕರಾಟೆ, ಜುಡೋ ಕಲಿತವನು. ಈತನಿಗೆ ಈಗ 49 ವರ್ಷ. ಇವನು 12 ಕ್ಕೂ ಹೆಚ್ಚು ಕಂಪನಿ ಗಳ ಒಡೆಯ. ಇನ್ನೋವೇಟಿವ್ ಲೀಡರ್, ಗೇಮ್ ಚೇಂಜರ್, ಇಡೀ ಜಗತ್ತಿನಲ್ಲೇ ಅತ್ಯಂತ ಶ್ರೀಮಂತರಲ್ಲಿ ಈತನೂ ಕೂಡ ಒಬ್ಬ.

ಈತನ ನವ ಆಲೋಚನೆ ಮತ್ತು ಗುರಿ ಏನೆಂದರೆ ಮಂಗಳನ ಅಂಗಳದಲ್ಲಿ ಮನುಷ್ಯನ ವಾಸಕ್ಕೆ ನೆಲೆ ಕಲ್ಪಿಸುವುದೇ ಇವನ ಹೆಗ್ಗುರಿ. ತನ್ನದೇಯಾದ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸಿ, ಬೆಂಗಳೂರಿನಿಂದ ಮೈಸೂರಿಗೆ ಕೆಎಸ್ಸಾರ್ಟಿಸಿ ಬಸ್ ಸಂಚರಿಸುವ ರೀತಿಯಲ್ಲಿ ಪ್ರಯಾಣಿಕರನ್ನು ರಾಕೆಟ್ ನಲ್ಲಿ ಬಾಹ್ಯಾಕಾಶ ಪ್ರವಾಸ ಮಾಡಿಸುವುದು ಇವನ ಹೆಬ್ಬಯಕೆ.

ಇನ್ನು ಮತ್ತೊಂದು ಆಲೋಚನೆಯ ಕನಸಿನ ಹತ್ತಿರ ಬಂದೇ ಬಿಟ್ಟಿದ್ದಾನೆ. ದಿ/30/05/2020 ರಂದು ಫ್ಲಾರಿಡಾದ ನಾಸಾದ ಕೆನಡಿ ಕೇಂದ್ರದಿಂದ ಮಸ್ಕನ ಸ್ಪೇಸ್ ಎಕ್ಸ್ ಕಂಪನಿಯ ಫಾಲ್ಕನ್-9, ರಾಕೆಟ್, ಬಾಬ್ ಬೆಹ್ನಕೆನ್ ಮತ್ತು ಡೌಗ್ ಹರ್ಲೆ ಎಂಬ ವ್ಯೋಮಯಾನಿಗಳನ್ನು ಹೊತ್ತು ಆಕಾಶಕ್ಕೆ ಜಿಗಿಯಿತು. ಇದು ಯಶಸ್ವಿಯಾಗಿ ಕಕ್ಷೆಗೆ ಸೇರಿತು. ಇದು ಖಾಸಗಿ ಕಂಪನಿಯೊಂದರ ಮಾಂತ್ರಿಕ ಸಾಧನೆ. ಕೋವಿಡ್ -19ರ ಭಯ ವನ್ನು ನಿರ್ಲಕ್ಷಿಸಿ ಒಂದೂವರೆ ಲಕ್ಷ ಮಂದಿ ಈ ಮಹಾ ಜಿಗಿತವನ್ನು ಕಣ್ತುಂಬಿಕೊಂಡರು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಈ ಸಂದರ್ಭದಲ್ಲಿ ಹಾಜರಿದ್ದರು.

ಸೆಕೆಂಡಿಗೆ ಏಳೂವರೆ ಕಿಲೋ ಮೀಟರ್ ವೇಗದಲ್ಲಿ ಭೂಮಿಯಿಂದ ನಾಲ್ಕು ನೂರು ಕಿಲೋ ಮೀಟರ್ ಎತ್ತರದಲ್ಲಿ ಸುತ್ತುತ್ತಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ತಂಗುದಾಣಕ್ಕೆ ಯಾನಿಗಳ ಸಮೇತ ಕ್ರ್ಯೂ ಡ್ರ್ಯಾಗನ್ ಜೋಡಣೆಗೊಂಡಿತು. ಲಾಂಚ್ ವೆಹಿಕಲ್ ಫಾಲ್ಕನ್-9 ಬೂಸ್ಟರ್ ಮರಳಿ ಫ್ಲಾರಿಡಾಗೆ ವಾಪಾಸ್ ಬಂದಿತು.

ಮುಂದಿನ ವರ್ಷ 55 ಮಿಲಿಯನ್ ಡಾಲರ್ ವೆಚ್ಚದಲ್ಲಿ ಬಾಹ್ಯಾಕಾಶ ಯಾನ ಮಾಡಿಸುತ್ತೇವೆಂದು ಸ್ಪೇಸ್ ಎಕ್ಸ್ ಹೇಳಿಕೊಂಡಿದೆ. ಇವನಿಗೆ ಸ್ಪೀಡ್ ಎಂದು ಕರೆಯುತ್ತಾರೆ. ಜಿಪ್-2 ಎನ್ನುವ ತಂತ್ರಾಂಶ ಕಂಪನಿಯನ್ನು ಸ್ಥಾಪಿಸುವ ಮೂಲಕ 27ನೇ ವರ್ಷಕ್ಕೆ ಬಿಲಿಯನೇರ್ ಆದ. ಇವನ ಆಲೋಚನೆ ಎಂತದ್ದು ಎಂದರೆ ಸಂಚಾರ ದಟ್ಟಣೆಯಿಂದ ಬೇಸರಗೊಂಡು ಸುರಂಗ ಸಾರಿಗೆಯ ಪರ್ಯಾಯ ಯೋಜನೆಯನ್ನು ರೂಪಿಸಿದವನು. ಇದಕ್ಕಾಗಿ ಬೋರಿಂಗ್ ಎನ್ನುವ ಕಂಪನಿ ಸ್ಥಾಪಿಸಿದ. ಇವನು ನ್ಯೂಯಾರ್ಕ್‌ನಿಂದ ವಾಷಿಂಗ್ಟನ್ ಡಿಸಿಗೆ 370 ಕಿಮೀ ದೂರವನ್ನು ಸುರಂಗ ಮಾರ್ಗದ ಮೂಲಕ ಕೇವಲ 29 ನಿಮಿಷಗಳಲ್ಲಿ ತಲುಪುವ ಯೋಜನೆಯನ್ನು ಮುಂದಿನ ವರ್ಷ ನನಸು ಮಾಡುತ್ತಿದ್ದಾನೆ.

ಮಸ್ಕನ ಮಗದೊಂದು ಅದ್ಭುತ ಆಲೋಚನೆ ಹೈಪರ್ ಲೂಪ್ ಎಂಬ ಕೊಳವೆ ಮಾರ್ಗದ ಯೋಜನೆ. ಇದರ ಮೂಲಕ ಕ್ಯಾಪ್ಸೂಲ್‌ಗಳೂ ಅಸಾಧ್ಯ ವೇಗದಲ್ಲಿ ಚಲಿಸುತ್ತವೆ. ಈ ಎಲ್ಲ ಕಾಮಗಾರಿಗಳ ಫಲ ಒಂದೆರಡು ವರ್ಷಗಳಲ್ಲಿ ಜನರಿಗೆ ಸಿಗಲಿದೆ. ಕೃತಕ ಬುದ್ಧಿಮತ್ತೆ, ಅನ್ವಯಿಕ ವಲಯಗಳನ್ನು ಶೋಧಿಸಲು ಓಪನ್ ಎಐ ಎನ್ನುವ ಕಂಪನಿಯನ್ನು ಸಹ ಸ್ಥಾಪಿಸಲಿದ್ದಾನೆ.

ಇವನ ನವ ಆಲೋಚನೆಗಳನ್ನು ಕೇಳಿದರೆ ನಮಗೆಲ್ಲ ಒಂದು ನವೋಲ್ಲಾಸ ಮೂಡುತ್ತದೆ. ಅದನ್ನು ನೋಡಿದರೆ ಇನ್ನು ನವೋಲ್ಲಾಸ ಹೆಚ್ಚಾಗುತ್ತದೆ. ಇದೆಲ್ಲವನ್ನೂ ಗಮನಿಸಿದಾಗ ಈತನೊಬ್ಬ ಉತ್ತಮ ಹಾಗೂ ಉತ್ತುಂಗ ಆಲೋಚನೆಗಾರ.

ತನ್ನ ಆಲೋಚನೆ ಹಾಗೂ ನವೋಲ್ಲಾಸ ದಿಂದ ಅವನು 25 ಮಂದಿ ಜಗದೇಕ ವೀರರ ಸಾಲಿನಲ್ಲಿ ಮಸ್ಕ್ ಇದ್ದಾನೆ. ತಮ್ಮದೇ ದಾರಿ ಮತ್ತು ಗುರಿಗಳನ್ನು ಬೆನ್ನತ್ತಿ ಹೋಗುವ ಧೈರ್ಯಶಾಲಿಗಳಿಗೆ ರೋಲ್ ಮಾಡೆಲ್ ಆಗಿದ್ದಾನೆ. ಈಗಿನ ಜಗತ್ತಿನಲ್ಲಿ ಇದನ್ನೆಲ್ಲ ನೋಡಿದರೆ "ನಾವು ಇಂದಿನ ಜಗತ್ತಿಗೆ ಒಗ್ಗಿಕೊಂಡು, ಪ್ರಯೋಜನಾಶೀಲತೆಯನ್ನು ಕಲಿತುಕೊಂಡು, ಹೊಸ ಆಲೋಚನೆಗಳಿಂದ ಜನರ ನವೋಲ್ಲಾಸ ಕಂಡು ಯಶಸ್ಸನ್ನು" ಕಾಣಬಹುದು.

- ಅನಘ.ಎನ್.ಪಿ., 9ನೇ ತರಗತಿ
ಶ್ರೀ ತರಳಬಾಳು ಸೆಂಟ್ರಲ್ ಸ್ಕೂಲ್
ಅನುಭವ ಮಂಟಪ, ದಾವಣಗೆರೆ.

## ಶಿಕ್ಷಕಿ ಶಾಂತಾ ಚೆಸ್‌ನಲ್ಲಿ ಪ್ರಥಮ



ಹರಿಹರ, ಫೆ.15- ಇತ್ತೀಚೆಗೆ ನಡೆದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಮಲೇಬೆನ್ನೂರು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎನ್. ಎಸ್. ಶಾಂತಾ ಪಾಲ್ಗೊಂಡಿದ್ದು, ಚೆಸ್ ಆಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ.

## ಉಪಾಧ್ಯಕ್ಷರಾಗಿ ಬಿ.ಎಸ್. ಚಂದ್ರಪ್ಪ



ದಾವಣಗೆರೆ, ಫೆ.15- ಆಕಸ್ಮಿಕವಾಗಿ ತೆರವಾದ ಹೊನ್ನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿ.ಎಸ್. ಚಂದ್ರಪ್ಪ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ನಗರದ 15ನೇ ವಾರ್ಡ್ ಅಭಿವೃದ್ಧಿಗೆ ಪಾಲಿಕೆ ಸದಸ್ಯೆ ಆಶಾ ಅವರಿಗೆ ಮನವಿ



ದಾವಣಗೆರೆ, ಫೆ.15- ಮಹಾನಗರ ಪಾಲಿಕೆಯ 15ನೇ ವಾರ್ಡಿನ ಶಂಕರ ವಿಹಾರ ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಪಾರ್ಕ್ ಮತ್ತು ಉದ್ಯಾನವನ ಮತ್ತು ಶ್ರೀ ಸಿದ್ಧಿವಿನಾಯಕ ದೇವಸ್ಥಾನಗಳನ್ನು ಪಾಲಿಕೆ ವತಿಯಿಂದ ಅಭಿವೃದ್ಧಿಗೊಳಿಸಬೇಕೆಂದು ಶ್ರೀ ವರಸಿದ್ಧಿ ವಿನಾಯಕ ಸೇವಾ ಸಮಿತಿಯ ಅಧ್ಯಕ್ಷ ಎಂ. ಮಹೇಶ್ವರಯ್ಯ, ಬಿ.ಜಿ. ಚಂದ್ರಶೇಖರಪ್ಪ, ಜಿ. ಎಸ್. ಚಂದ್ರಪ್ಪ, ವೆಂಕಟೇಶಪ್ಪ, ಟಿ. ರಾಕೇಶ್ ಹಾದಿಮನಿ ಮರಿಗೌಡ್ರು, ಶ್ರೀಧರ್, ಮೋತಿ ನಾಯಕ್ ಶಿವಕುಮಾರ್ ಮತ್ತು ಇತರೆ ಪದಾಧಿಕಾರಿಗಳು ಪಾಲಿಕೆ ಸದಸ್ಯರಾದ ಡಿ.ಎಸ್. ಆಶಾ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕ ವೀರಯ್ಯಸ್ವಾಮಿ, ಆಶಾ ಅವರ ಅವರ ಪತಿ ಉಮೇಶ್, ಸಂಗೀತ ಮಾಸ್ಟರ್ ಕಲ್ಲಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಬಾಲಗೌರವ ಪ್ರಶಸ್ತಿಗಾಗಿ ಅರ್ಜಿ

ದಾವಣಗೆರೆ, ಫೆ. 15 - ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ ಆಯೋಜಿಸಿರುವ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ವಿಶೇಷ ಸಾಧನೆಗೈದ 18 ವರ್ಷದ ಒಳಗಿನ ಮಕ್ಕಳಿಗೆ ಬಾಲಗೌರವ ಪ್ರಶಸ್ತಿ' ಪ್ರದಾನ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಮಕ್ಕಳು ಸಂಗೀತ, ನೃತ್ಯ, ನಟನೆ, ಕ್ರೀಡೆ, ಮತ್ತು ಚಿತ್ರಕಲೆ, ಕರಕುಶಲ, ಬರವಣಿಗೆ, ಸಂಶೋಧನೆ(ಹೊಸ ಆವಿಷ್ಕಾರ) ಈ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ್ದು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಪುರಸ್ಕೃತ ಮಗುವಾಗಿರಬೇಕು. ಇಂತಹ ಮಕ್ಕಳು ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ಅರ್ಜಿಯನ್ನು ಯೋಜನಾಧಿಕಾರಿಗಳು, ಕರ್ನಾಟಕ ಬಾಲವಿಕಾಸ ಅಕಾಡೆಮಿ, ಚಂದ್ರಿಕಾ ಲೇಔಟ್ ಹಿಂಭಾಗ, ಕೆ. ಎಚ್.ಬಿ ಕಾಲೋನಿ, ಲಕ್ಕಮ್ಮನಹಳ್ಳಿ ಧಾರವಾಡ -580004 ವಿಳಾಸಕ್ಕೆ ಇದೇ ದಿನಾಂಕ 20 ರೊಳಗೆ ಅರ್ಜಿಯನ್ನು ಸಲ್ಲಿಸುವುದು.

ಅರ್ಜಿ ಸಲ್ಲಿಸುವಾಗ ಅಕಾಡೆಮಿ ಬಾಲಗೌರವ ಪ್ರಶಸ್ತಿಗಾಗಿ ಅರ್ಜಿ ಎಂದು ಲಕೋಟೆ ಮೇಲೆ ನಮೂದಿಸಬೇಕು ಎಂದು ಕರ್ನಾಟಕ ರಾಜ್ಯ ಬಾಲವಿಕಾಸ ಅಕಾಡೆಮಿ ಅಧ್ಯಕ್ಷ ಈರಣ್ಣ ಶಿ. ಜಡಿ ತಿಳಿಸಿದ್ದಾರೆ.

## ಹರಪನಹಳ್ಳಿ : ಕ್ರೀಡೆಯಲ್ಲಿ ಅಮರೇಶ್ ಗುತ್ತೇದಾರ ರಾಜ್ಯ ಮಟ್ಟಕ್ಕೆ ಆಯ್ಕೆ



ಹರಪನಹಳ್ಳಿ, ಫೆ.15- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬಳ್ಳಾರಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಮೊನ್ನೆ ನಡೆದ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡೆಯಲ್ಲಿ 40-50 ವಯೋಮಾನದ ಪುರುಷ ವಿಭಾಗದ 100 ಮೀ. ಓಟದಲ್ಲಿ ಹರಪನಹಳ್ಳಿ ಸಮಾಜ ಕಲ್ಯಾಣ ಇಲಾಖೆಯ ನಿಲಯ ಮೇಲ್ವಿಚಾರಕ ಅಮರೇಶ ಗುತ್ತೇದಾರ ಭಾಗವಹಿಸಿ, ವಿಜೇತರಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜಪ್ಪ, ಸಹಾಯಕ ನಿರ್ದೇಶಕ ಆನಂದ ಡೊಳ್ಳಿನ್ ಸಂತಸ ಹಂಚಿಕೊಂಡಿದ್ದಾರೆ.

## ಕೂಡ್ಲಿಗಿಯಲ್ಲಿ ಕುಂದು-ಕೊರತೆ ಸಭೆ



ಕೂಡ್ಲಿಗಿ, ಫೆ. 15- ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಈಚೆಗೆ ಡಿವೈಎಸ್ಪಿ ಜಿ.ಹರೀಶ್ ರೆಡ್ಡಿ ಅಧ್ಯಕ್ಷತೆಯಲ್ಲಿ ದಲಿತರ ಕುಂದು-ಕೊರತೆ ಸಭೆ ಜರುಗಿತು. ಸಿಪಿಐ ವಸಂತ ಅಸೋದೆ, ಪಿಎಸ್ಐ ತಿಮ್ಮಣ್ಣ ಚಾಮನೂರು ವೇದಿಕೆಯಲ್ಲಿದ್ದರು. ಹಿರಿಯ ದಲಿತ ಮುಖಂಡ ಉಮೇಶ್ ಮಾತನಾಡಿದರು.

## ಹರಿಹರದಲ್ಲಿ ಪೌರ ಕಾರ್ಮಿಕರ ಸಂಘದ ಅಧ್ಯಕ್ಷರಿಗೆ ಸನ್ಮಾನ



ಹರಿಹರ, ಫೆ.11- ನಗರಸಭೆ ಪೌರಕಾರ್ಮಿಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸದಾಶಿವ ಪೈಲ್ವಾನ್ ಅವರನ್ನು ನಗರಸಭೆ ಸದಸ್ಯರಾದ ಆರ್.ಸಿ. ಜಾವೇದ್, ಕೆ.ಜಿ. ಸಿದ್ದೇಶ್, ಹನುಮಂತಪ್ಪ, ಜೆಡಿಎಸ್ ಮುಖಂಡರಾದ ಸುರೇಶ್ ಚಂದಪೂರ್, ಅಂಗಡಿ ಬಸಟ್ಟೆಪ್ಪ ಬೇವಿನಹಳ್ಳಿ, ಕಾಂಗ್ರೆಸ್ ಮುಖಂಡ ಕೆ. ಮರಿದೇವ ಇನ್ನಿತರರು ಸನ್ಮಾನಿಸಿ, ಗೌರವಿಸಿದರು.

# ರೈತರೇ ನೀವೇ ಸರ್ವಸ್ವ ಆದರೂ...

**ಓದುಗರ ಪತ್ರ**

ಮಾನ್ಯರೇ,

ಮನುಷ್ಯ ಜೀವಿ ಇರುವುದೇ ರೈತರ ಶ್ರಮದಿಂದ, ನಿಮ್ಮ ಕಷ್ಟದಿಂದ ನಾವೆಲ್ಲ ಉಣ್ಣುತ್ತಿದ್ದೇವೆ. ನೀವಿಲ್ಲ ಎಂದರೆ, ನೀವು ಬೆಳೆಯಲಿಲ್ಲ ಅಂದರೆ ಬದುಕು ಶೂನ್ಯ ಮಣ್ಣು ತಿನ್ನಬೇಕಾದೀತು, ನಿಮಗೆ ಇಡೀ ಮಾನವ ಕುಲದ ನಮಸ್ಕಾರ.

ಆದರೂ ನಿಮಗೂ ಹೊಣೆಗಾರಿಕೆ, ದೇಶ ಭಾಷೆಗಳ ಅಭಿಮಾನ ಇರಲೇಬೇಕು. ನಿಮ್ಮಲ್ಲಿ ಎಲ್ಲವೂ ಇದೆ.

ಆದರೆ ರೈತ ನಾಯಕರು ರೈತರ ಮುಗ್ಧತೆಯನ್ನು ಹೇಗೆ ಬೇಕೋ ಹಾಗೆ ಬಳಸಿಕೊಳ್ಳುತ್ತಿದ್ದಾರೆ. ನಿಮಗೆ ಏಕೆ ನಿಮ್ಮ ನಾಯಕರು ರಸ್ತೆ ಮೇಲೆ ಕಣ ಮಾಡಬಾರದು ಸಾರ್ವಜನಿಕರಿಗೆ ತೊಂದರೆ, ಅಪಾಯ ಆಗಬಹುದು ಎಂದು ಹೇಳಿ ಬದಲಾಯಿಸಲು ಪ್ರಯತ್ನಿಸಲಿಲ್ಲ.

ಕೇಜ್‌ವ್ಹೀಲ್ ಹಾಕಿ ಟ್ರ್ಯಾಕ್ಟರ್ ಗಳನ್ನು ಓಡಿಸಬಾರದು ಎಂಬ ಮಾಹಿತಿಯನ್ನು ಏಕೆ ನೀಡುತ್ತಿಲ್ಲ, ರಸ್ತೆಗಳು ಹಾಳಾದರೆ ಪದೇ ಪದೇ ಅದೇ ರಸ್ತೆ ಮಾಡಿಸಲಾಗುತ್ತದೆಯೇ? ರೈತರಿಗೂ ತೊಂದರೆಯೇ ಅಲ್ಲವೇ?

ಕಬ್ಬಿನ ಕಾರ್ಖಾನೆಗೆ ಕಬ್ಬು ಸಾಗಿಸಲು ಎರಡೆರಡು ಬಾಡಿ ಸೇರಿಸಿ ತರುವುದರಿಂದ ರಸ್ತೆ ಅಪಘಾತಗಳು ಸಂಭವಿಸುತ್ತವೆ ಎಂದು ನಿಮಗೆ ಮನವರಿಕೆ ಮಾಡಿಕೊಡಬೇಕಿತ್ತಲ್ಲವೇ?

ನಿಮ್ಮನ್ನು ಇತರರು ಹೇಗೆ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬುದಕ್ಕೆ ದೆಹಲಿಯಲ್ಲಿ ನಡೆದ ಟ್ರ್ಯಾಕ್ಟರ್ ಹೋರಾಟದ ದುರುಪಯೋಗವೇ ನಿದರ್ಶನ.

ರೈತರಿಗೆ ಹೆಚ್ಚಿನ ಗೌರವ, ಮನ್ನಣೆ ದೊರೆಯಲೇಬೇಕು. ಆದರೆ ರೈತ ನಾಯಕರು ರೈತರ ಮುಗ್ಧತೆಯ ಲಾಭ ಪಡೆಯುತ್ತಿದ್ದಾರೆ. ರೈತರು ಜಾಗ್ರತರಾಗುವುದು ಅನಿವಾರ್ಯ. ರೈತರಿಂದ ರಾಜಕೀಯ ಇರಬೇಕೇ ಹೊರತು, ರೈತರಿಗಾಗಿ ರಾಜಕೀಯ ಮಾಡಬಾರದು.. ರೈತರು ಏನು ಮಾಡಿದರೂ ನಡೆಯುತ್ತದೆ ಎನ್ನುವ ಧೋರಣೆಯೂ ಸರಿಯಲ್ಲ ಅಲ್ಲವೇ?

- ಎಸ್ . ಜಿ .ದಾಸ್, ಜಗಳೂರು.


**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಮನೆಗಳು ಮಾರಾಟಕ್ಕಿವೆ**
ಡಿ.ಸಿ.ಎಂ. ಲೇಔಟ್‌ನಲ್ಲಿ 30x40 South. ಹೈಟೆಕ್ ಲೇಔಟ್‌ನಲ್ಲಿ 30x50 west 3 ಬೆಡ್‌ರೂಂ ಮನೆ. 40x60 North 3 ಬೆಡ್‌ರೂಂ ಮನೆ ಕುವೆಂಪು ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಪಕ್ಕ ವಿನಾಯಕ ಬಡಾವಣೆಯಲ್ಲಿ 80x60 ಪೂರ್ವ, ಬಸವೇಶ್ವರ ಬಡಾವಣೆಯಲ್ಲಿ 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು ಮಾರಾಟಕ್ಕೆ (ರೂ. 1,380 ಅಡಿಗೆ)**
ಸರ್ಕಾರಿ ನೌಕರರ ಬಡಾವಣೆ 1ನೇ ಹಂತ 'ಬಿ' ಬ್ಲಾಕ್ ನಲ್ಲಿ 35x50 ಪಶ್ಚಿಮ, ಶಾಮನೂರು ಬೈಪಾಸ್ ಹತ್ತಿರ.
ಕಿರಣ್ ಬೂಸ್ನೂರ್ : 98440-63409
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ, ಕೇವಲ ಅರ್ಧ ಪರ್ಸೆಂಟ್ (1/2 %) ಕಮೀಷನ್ ಗೆ)

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ 40x84 North, 80x60 East, 80x60 West, 70x50 East south Corner, 30x50 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130
99166 12110

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
94803 43063

**ಮಳಿಗೆಗಳು ಬಾಡಿಗೆಗಿವೆ**
ದಾವಣಗೆರೆ ಪಿ.ಬಿ.ರಸ್ತೆಯಲ್ಲಿರುವ ದಿ ದಾವಣಗೆರೆ ಆಟೋಮೊಬೈಲ್ಸ್ ಇಂಡಸ್ಟ್ರೀಯಲ್ ಕೋ-ಆಪ್ ಸೊಸೈಟಿಗೆ ಸೇರಿರುವ ಕಾಂಪ್ಲೆಕ್ಸ್‌ನ ಮೊದಲನೇ ಮಹಡಿಯಲ್ಲಿ ಮಳಿಗೆಗಳು ಬಾಡಿಗೆಗಿವೆ.
ಸಂಪರ್ಕಿಸಿ : 70266-43088

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ.
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್. ಲೇಔಟ್‌ನಲ್ಲಿ 30X50 ಪೂರ್ವ, 30X40 ಪಶ್ಚಿಮ, 27X60 ಪಶ್ಚಿಮ, 40 X 60 ಪೂರ್ವ,40X 60 ದಕ್ಷಿಣ.
86181 82332

**ಮನೆ ಲೀಸ್‌ಗೆ ಇದೆ**
#3616/154, ಬಾಲಾಜಿ ನಗರ ಪಾರ್ಕ್ ಎದುರು ಕುಂದುವಾಡ ರೋಡ್, ದಾವಣಗೆರೆ ಇಲ್ಲಿ 1ನೇ ಮಹಡಿಯಲ್ಲಿ 2BHK ಮನೆ ಲೀಸ್‌ಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
94817 21551, 97417 45102

**ಸೈಟು ಮಾರಾಟಕ್ಕಿದೆ**
ಗ್ಲಾಸ್ ಹೌಸ್ ಪಕ್ಕದಲ್ಲಿ (ಬಲ ಭಾಗ) 30x40 ದಕ್ಷಿಣ, 30x50 ಉತ್ತರ, 40x60 ಪೂರ್ವ(40 ಅಡಿ ರಸ್ತೆಗೆ), ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ನೌಕರರಿಗೆ ಆದ್ಯತೆ.
90198 88512, 99008 37087

**ವಾಣಿಜ್ಯ ಮಳಿಗೆ ಬಾಡಿಗೆಗೆ**
400 ಚ.ಅಡಿಗಳು (33x12) ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಗೇಟ್ ಎದುರು, KSRTC ಬಸ್‌ಸ್ಟ್ಯಾಂಡ್ ರಸ್ತೆ, ನಿಟುವಳ್ಳಿ, ಆಂಜನೇಯ ಬಡಾವಣೆ, ದಾವಣಗೆರೆ-577004. ಸಂಪರ್ಕಿಸಿ
98444 66349

**ಬಾಡಿಗೆಗೆ / ಲೀಜ್‌ಗೆ**
ಶ್ರೀ ಸಿದ್ದೇಶ್ವರ ರೈಸ್ ಮಿಲ್, ಆರನೇ ಕಲ್ಲು ಹದಡಿ ರಸ್ತೆಯಲ್ಲಿ ಗೋಡೌನ್‌ಗಳು ಬಾಡಿಗೆಗೆ ಅಥವಾ ಲೀಸ್‌ಗೆ 4200sqft + 4300 sqft = 8500 sqft
ವಿಚಾರಿಸಿ: V.C. ಶಿವಮೂರ್ತಿ
86604 30869

**ರೂಂಗಳು ಬಾಡಿಗೆ ಸಿಗುತ್ತವೆ**
15 ರೂಂಗಳು, ಡಬಲ್ ಕಾಟ್, ಅಟ್ಯಾಚ್ ಬಾತ್‌ರೂಂ, 1 ಊಟದ ಹಾಲ್ ಅಟ್ಯಾಚ್ ಬಾತ್‌ರೂಂ, 1 ಊಟದ ಹಾಲ್, ಅಡುಗೆ ಮನೆ, ಬಾಡಿಗೆಗೆ ದೊರೆಯುತ್ತದೆ. ಮೊದಲ ಆದ್ಯತೆ ಪಿ.ಜಿ ವಿದ್ಯಾರ್ಥಿಗಳಿಗೆ ಮಾತ್ರ. ಲೇಡಿಸ್ or ಜೆಂಟ್ಸ್
81055 42689

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ ಅಳತೆ :15x30. ವಿಚಾರಿಸಿ
89041 29928

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**Required**
Our DTP center required a candidate with knowledge of uploading job application on internet with 2 years experience in Kannada & English typing.
contact: 78924 66642

**ತಕ್ಷಣ ಬೇಕಾಗಿದ್ದಾರೆ**
Housekeeping Supervisor, Security Guard, Steward (suppliers) Cleaner Boys
ಅನುಭವವುಳ್ಳವರಿಗೆ ಆದ್ಯತೆ.
Hotel Pooja International
P.B. Road, Davanagere.
96060 96697, 96861 07555, 96060 96698

**Building for Rent**
on Mama's Joint on 1st Floor Prime Location is on Rent.
Contact :
98440-65638

**VS Paramedical college**
SSLC ಪಾಸ್/PUC- ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ' course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ. SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
90195 80600
85532 78258

**FAILED & REGULAR COACHING**
for SSLC & IInd PUC
PCMB, Commerce, Arts
SINCHANA ACADEMY
Near SBI ATM, Ram & co Circle, Davangere.
85532 78258 90195 80600

**Professional make up Artist Course**
one Month Intense Bridal make up Course. Registration are open (only for ladies) certified course more information call
70190 73324

**ಕಟ್ಟಡ ಬಾಡಿಗೆಗೆ ಇದೆ**
ನರ್ಸಿಂಗ್ ಹೋಮ್ ಮಾಡಲು ಯೋಗ್ಯವಾಗಿರುವ ಕಟ್ಟಡ ಬಾಡಿಗೆಗೆ ಇದೆ. ಸ್ಥಳ; ಬಾಯ್ಸ್ ಹಾಸ್ಟೆಲ್ ರೋಡ್ ಹತ್ತಿರ
77605 62788

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು PUC, B.Com ಆದಂತಹ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ : 20 ರಿಂದ 25 (ಅವಿವಾಹಿತರು). ದಾವಣಗೆರೆ ನಗರದಲ್ಲಿ ವಾಸಿಸುವವರು ಮಾತ್ರ. ಸ್ವ-ವಿವರಗಳೊಂದಿಗೆ ಬೆಳಿಗ್ಗೆ 11 ರಿಂದ ಸಂಜೆ 7 ರವರೆಗೆ. ಸಂಪರ್ಕಿಸಿರಿ.
ಗುಪ್ತ ಗೋಲ್ಡ್ ಪ್ಯಾಲೇಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
80957 43423

**TEACHERS WANTED**
B.Sc, B.Ed candidates with good english communication skill to work in a reputed english medium school.
ಶಾಲಾ ವಾಹನ ಚಲಾಯಿಸಲು ಚಾಲಕರು ಬೇಕಾಗಿದ್ದಾರೆ.
ಡ್ರೈವಿಂಗ್ ಲೈಸೆನ್ಸ್ ಇದ್ದವರು ಕರೆ ಮಾಡಿ.
99641 40925

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**JOBS**
MCS ACADEMY
Training & Placement Cell
98444 92888

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಡಾ॥ ಮಹೇಶ್ ರಾಜಶೇಖರಯ್ಯ**
Hematologist ಇವರು
ದಿ. 17-02-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಹೊಸ ಚೀಟಿ ಗುಂಪುಗಳು**
ಶ್ರೀ ಮಾರುತಿ ಚಿಟ್ ಫಂಡ್ಸ್ (ರಿ.)
ಕೆ.ಬಿ. ಬಡಾವಣೆ, ದಾವಣಗೆರೆ.
10,000x25=2,50,000/-
15,000x30=4,50,000/-
4000x25=1,00.000/-
7795149297, 9986122909

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
ಡೀಲರ್ಸ್, ಸೇಲ್‌ಎಕ್ಸಿಕ್ಯೂಟಿವ್, ಆಫೀಸ್ ಅಡ್ಮಿನ್ (ಲೇಡಿ)
SRS SOLAR ENERGY
99005 47328
72043 63665

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day nutana collage road, Vidyanagara 2nd main, Davangere
77603 16576
90080 55813

# ಅಕ್ರಮ ಮದ್ಯ ಮಾರಾಟ ತಡೆಗೆ ಹೈಕೋರ್ಟ್ ಆದೇಶ ಪಾಲನೆಗೆ ಆಗ್ರಹ

## ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಮನವಿ

ದಾವಣಗೆರೆ, ಫೆ.15- ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಯುವಂತೆ ಹೈಕೋರ್ಟ್ ಆದೇಶ ನೀಡಿದ್ದು, ಅದನ್ನು ಪಾಲಿಸುವಂತೆ ಒತ್ತಾಯಿಸಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ವತಿಯಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಧಿಕಾರಿಗಳ ಕಚೇರಿಗೆ ಸಂಘಟನೆಯ ಕಾರ್ಯಕರ್ತೆ ಪಿ.ಎಸ್. ಸುಧಾ ಅವರ ನೇತೃತ್ವದಲ್ಲಿ ತೆರಳಿದ ಕಾರ್ಯಕರ್ತೆಯರು, ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಅಕ್ರಮ ಮದ್ಯಕ್ಕೆ ಅನೇಕರು ಬಲಿಯಾಗಿದ್ದಾರೆ. ಮತ್ತೆ ಕೆಲವರು ದಿನದ 24 ಗಂಟೆಯೂ, ವರ್ಷದ 365 ದಿನವೂ ಮದ್ಯ ಸಿಗುವ ಕಾರಣಕ್ಕೆ ಅಕ್ರಮ ಮದ್ಯದ ದಾಸರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಯಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರಾಜ್ಯಾದ್ಯಂತ ಅಕ್ರಮ ಮದ್ಯ ಮಾರಾಟ ಜೋರಾಗಿ ನಡೆಯುತ್ತಿದೆ. ಅಂಗಡಿ, ಕಿರಾಣಿ ಅಂಗಡಿ, ಸಣ್ಣ ಪುಟ್ಟ ಗೂಡಂಗಡಿ, ಮನೆಗಳಲ್ಲಿಯೂ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ. ದಿನದ 24 ಗಂಟೆಯೂ ಅಕ್ರಮ ಮದ್ಯ ಪೂರೈಕೆಯಾಗುತ್ತಿದ್ದು, ಅಸಂಖ್ಯಾತ ಕುಟುಂಬಗಳ ಸದಸ್ಯರು ಇದರಿಂದಾಗಿ ನೆಮ್ಮದಿಯನ್ನೇ ಕಳೆದುಕೊಂಡಿದ್ದಾರೆ ಎಂದು ಆರೋಪಿಸಿದರು.

ರಾಜ್ಯದ ಹಳ್ಳಿ ಹಳ್ಳಿಗಳ ಗಲ್ಲಿ ಗಲ್ಲಿಗಳಲ್ಲಿ ಎಗ್ಗಿಲ್ಲದೇ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ. ಈಗಾಗಲೇ ಸಾಕಷ್ಟು ಸಲ ಸಂಬಂಧಿಸಿದ ಅಬಕಾರಿ, ಪೊಲೀಸ್ ಇಲಾಖೆ ಅಧಿಕಾರಿಗಳ, ಆಯಾ ಜಿಲ್ಲಾಡಳಿತಗಳ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಘಟನೆಯ ಮಹಿಳೆಯರ ಹೋರಾಟವನ್ನು ಗಮನಿಸಿದ ಹೈಕೋರ್ಟ್, ತಕ್ಷಣವೇ ಅಕ್ರಮ ಮದ್ಯ ಮಾರಾಟ ನಿಲ್ಲಿಸಲು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಿದ್ದರೂ ಸಹ ಇಂದಿಗೂ ಹಳ್ಳಿ ಹಳ್ಳಿಗಳ ಗಲ್ಲಿ ಗಲ್ಲಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವುದು ಮಾತ್ರ ನಿಂತಿಲ್ಲ. ನ್ಯಾಯಾಲಯದ ಆದೇಶಕ್ಕೆ ಸರ್ಕಾರವಾಗಲೀ, ಅಧಿಕಾರಿ ವರ್ಗವಾಗಲೀ ಕಿವಿಗೊಡುತ್ತಿಲ್ಲ ಎಂದು ದೂರಿದರು.

ಹೈಕೋರ್ಟ್ ಆದೇಶವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ಅಕ್ರಮ ಮದ್ಯ ಮಾರಾಟವನ್ನು ಇನ್ನು 15 ದಿನಗಳ ಒಳಗಾಗಿ ತಡೆಯಬೇಕು. ಅಕ್ರಮ ಮದ್ಯ ಮಾರಾಟಕ್ಕೆ ಸಂಪೂರ್ಣ ಕಡಿವಾಣ ಹಾಕದಿದ್ದರೆ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ತೀವ್ರ ಸ್ವರೂಪದ ಹೋರಾಟ ನಡೆಸಲಿದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಮುಖಂಡರಾದ ವೈ.ಆರ್. ಅಣ್ಣಪ್ಪ ಕಿತ್ತೂರು, ಸುಶೀಲಮ್ಮ, ನಾಗಮ್ಮ, ಶಾಂತಮ್ಮ, ನಿಂಗಪ್ಪ, ಶಾಂತಮ್ಮ, ಶಿಲ್ಪ ಕುರುಡಿ, ರಮೇಶ್, ನಾಗರತ್ನಮ್ಮ ಸೇರಿದಂತೆ ಇತರರು ಇದ್ದರು.

# 19 ರಂದು ಚನ್ನಗಿರಿಯಲ್ಲಿ ಬೇಡ ಜಂಗಮ ಸಮಾವೇಶ



ಹಾವೇರಿ, ಫೆ.15- ರಾಜ್ಯದ ಬೇಡ ಜಂಗಮರಿಗೆ ಸಂವಿಧಾನ ಬದ್ಧವಾಗಿ ದೊರೆಯಬೇಕಾದ ಹಕ್ಕುಗಳನ್ನು ಪಡೆಯಲು, ಇದೇ ದಿನಾಂಕ 19 ರಂದು ಚನ್ನಗಿರಿಯಲ್ಲಿ ನಡೆಯುವ ಬೃಹತ್ ಬೇಡ ಜಂಗಮ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಭಾಗವಹಿಸುವಂತೆ ಬೇಡ ಜಂಗಮ ಸಮಾಜದ ಜಿಲ್ಲಾಧ್ಯಕ್ಷ ಎಂ.ಎಂ. ಹಿರೇಮಠ ಕರೆ ನೀಡಿದರು.

ನಗರದ ರೇಣುಕ ಮಂದಿರ (ನಡುವಿನ ಮಠ) ದಲ್ಲಿ ನಡೆದ ಹಾವೇರಿ ಜಿಲ್ಲಾ ಬೇಡ ಜಂಗಮರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅತೀ ಹಿಂದುಳಿದ ಜಾತಿಗಳಲ್ಲಿ ಬೇಡ ಜಂಗಮ ಸಮಾಜವೂ ಒಂದು. ಕೇಂದ್ರ ಸರಕಾರ ಸಂವಿಧಾನದಲ್ಲಿ ಸ್ಪಷ್ಟವಾಗಿ ಬೇಡ ಜಂಗಮ ಜಾತಿಯ ಬಗ್ಗೆ ನಮೂದಿಸಿದೆ. ಅಲ್ಲದೇ ಸೂರ್ಯನಾಥ ಕಾಮತ್‌ರ ವರದಿಯಲ್ಲಿ ಮತ್ತು ಕೋರ್ಟ್ ಆದೇಶದಲ್ಲಿಯೂ ರಾಜ್ಯದ ಮಾಮೂಲಿ ಜಂಗಮರೇ ಬೇಡ ಜಂಗಮರು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಆದರೆ ಕೆಲ ರಾಜಕಾರಣಿಗಳ ಪ್ರಭಾವಕ್ಕೆ ಒಳಗಾಗಿ ಸರ್ಕಾರ ಮತ್ತು ಅಧಿಕಾರಿಗಳು ಬೇಡ ಜಂಗಮರಿಗೆ ಸಿಗಬೇಕಾಗಿರುವ ಜಾತಿ ಪ್ರಮಾಣ ಪತ್ರ ನೀಡಲು ನಿರಾಕರಿಸುತ್ತಿದ್ದಾರೆ ಎಂದರು.

ಜಂಗಮರೆಲ್ಲರೂ ಸಂಘಟನೆಯ ಮುಖಾಂತರ ನಮ್ಮ ಹಕ್ಕನ್ನು ಪಡೆಯಬೇಕಾಗಿದೆ.

ಜಿಲ್ಲಾ ಬೇಡ ಜಂಗಮ ಪ್ರಧಾನ ಕಾರ್ಯದರ್ಶಿ ಶಂಭುಲಿಂಗಯ್ಯ ಮಠದ ಮಾತನಾಡಿ, ಬೇಡ ಜಂಗಮರು ಯಾರ ಹಕ್ಕನ್ನೂ ಕಿತ್ತುಕೊಂಡಿಲ್ಲ ಮತ್ತು ಕಿತ್ತುಕೊಳ್ಳುತ್ತಿಲ್ಲ. ಆದರೆ ತಮಗೆ ಸಂವಿಧಾನಾತ್ಮಕವಾಗಿ ಸಿಗಬೇಕಾಗಿರುವ ಹಕ್ಕನ್ನು ಪಡೆದುಕೊಳ್ಳಲು ಸಂಘಟನೆಯ ಮುಖಾಂತರ ಹೋರಾಟ ಮಾಡಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಿವಯೋಗಿ ಹುಲಿಕಂತಿಮಠ, ಗುರುನಾಥಯ್ಯ ಮಳ್ಳೂರಮಠ, ರಾಜು ಲಕ್ಷ್ಮೇಶ್ವರಮಠ, ಕುಮಾರಸ್ವಾಮಿ ಹಿರೇಮಠ, ಶಿವಬಸಯ್ಯ ವಿರಕ್ತಮಠ, ಸಿದ್ದಯ್ಯ ಗೌರಿಮಠ, ಎಸ್.ಪಿ. ಮುದೇನೂರಮಠ, ಗುರುಶಾಂತಯ್ಯ ವಿ. ಹಿರೇಮಠ, ಚಂದ್ರಶೇಖರಯ್ಯ ಗುಂಡೂರಮಠ, ಶಂಕ್ರಯ್ಯ ಹೆಬ್ಬಳ್ಳಿಮಠ, ರುದ್ರಯ್ಯ ಮಡ್ಲಿಮಠ, ಜಿ.ಎಸ್. ಚನ್ನಾಪುರಮಠ, ಕೊಟ್ರಯ್ಯ ಚರಂತಿಮಠ ಸೇರಿದಂತೆ, ಅನೇಕರು ಭಾಗವಹಿಸಿದ್ದರು. ರಾಜು ಕಲ್ಯಾಣಮಠ ನಿರೂಪಿಸಿದರು. ಗುರುಬಸಯ್ಯ ಚಪ್ಪರದಹಳ್ಳಿಮಠ ವಂದಿಸಿದರು.

## ಮಲೇಬೆನ್ನೂರಿನಲ್ಲಿ ನಾಡಿದ್ದು ಪುರಸಭೆಯ ಆಯ-ವ್ಯಯ ಸಭೆ

ಮಲೇಬೆನ್ನೂರು, ಫೆ.15- ಮಲೇಬೆನ್ನೂರು ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಮಲೇಬೆನ್ನೂರು ಪುರಸಭೆಯ 2021-22ನೇ ಸಾಲಿನ ಆಯ-ವ್ಯಯವನ್ನು ತಯಾರಿಸುವ ಕುರಿತು ಪೂರ್ವಭಾವಿಯಾಗಿ ಸಾರ್ವಜನಿಕ ಸಮಾಲೋಚನೆ ನಡೆಸಲು ಸಭೆಯನ್ನು ನಾಡಿದ್ದು ದಿನಾಂಕ 18 ರಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ ಎಂದು ಮಲೇಬೆನ್ನೂರು ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

## ನಗರದಲ್ಲಿಂದು ವಿದ್ಯುತ್ ಇಲ್ಲ

ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಯುವ ಕಾಂಗ್ರೆಸ್‌ನಿಂದ ಪುಲ್ವಾಮಾ ದಾಳಿಯಲ್ಲಿ ಹುತಾತ್ಮ ಯೋಧರಿಗೆ ನಮನ



ದಾವಣಗೆರೆ, ಫೆ.15- ಜಮ್ಮು ಕಾಶ್ಮೀರದಲ್ಲಿ ನಡೆದ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ 40 ವೀರ ಯೋಧರ ಸ್ಮರಣಾರ್ಥ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಕಿತ್ತೂರು ರಾಣಿ ಚನ್ನಮ್ಮ ವೃತ್ತದಿಂದ ಮಹಾನಗರ ಪಾಲಿಕೆವರೆಗೆ ಕ್ಯಾಂಡಲ್ ಲೈಟ್ ಮಾರ್ಚ್ ಹಮ್ಮಿಕೊಳ್ಳಲಾಗಿತ್ತು.

ಅರುಣ ಸರ್ಕಲ್‌ನಲ್ಲಿ ಮಾತನಾಡಿದ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಭದ್ರತಾ ವೈಫಲ್ಯದಿಂದ ನಮ್ಮ ಯೋಧರ ಜೀವ ಬಲಿ ನೀಡಲಾಯಿತು ಎಂದು ವಿಷಾದಿಸಿದರು. ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ಜೈ ಜವಾನ್ ಜೈ ಕಿಸಾನ್' ಘೋಷಣೆ ಮಾಡಿ ದೇಶಕ್ಕೆ ಸೈನಿಕರ ಮತ್ತು ರೈತರ ಅವಶ್ಯಕತೆಯನ್ನು ಸಾರಿದ್ದರು.

ಆದರೆ ಈಗಿನ ಮೋದಿ ಸರ್ಕಾರದಲ್ಲಿ ಯೋಧರ ಜೀವಕ್ಕೆ ಬೆಲೆ ಇಲ್ಲ ಹಾಗೂ ರೈತರು ಬೀದಿಯಲ್ಲಿ ಹೋರಾಟ ಮಾಡುತ್ತಿದ್ದರೂ ಅವರ ಬಗ್ಗೆ ಕಾಳಜಿ ಇಲ್ಲ, ರೈತರನ್ನು ಮತ್ತು ಯೋಧರನ್ನು ಮರೆತ ಯಾವುದೇ ಸರ್ಕಾರ ಜನಪರ ಸರ್ಕಾರವಾಗಲು ಸಾಧ್ಯವಿಲ್ಲ ಎಂದು ಸರ್ಕಾರವನ್ನು ಟೀಕಿಸಿದರು.

ಮಹಾನಗರ ಪಾಲಿಕೆ ಮುಂಭಾಗದಲ್ಲಿರುವ ಹುತಾತ್ಮ ಯೋಧರ ಸ್ಮಾರಕಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮವನ್ನು ಮುಗಿಸಲಾಯಿತು.

ಈ ಸಂದರ್ಭದಲ್ಲಿ ಸೈಯ್ಯದ್ ಖಾಲಿದ್, ಮೈನುದ್ದೀನ್, ಮುಜಾಹಿದ್ ಪಾಷಾ, ಶಶಿಧರ್ ಪಾಟೀಲ್, ವಾಜಿದ್, ಓ.ಜಿ. ಕಿರಣ್, ಐಯಾಜ್ ಅಹಮದ್, ಜಫರುಲ್ಲಾ, ರಘು ಧಮನಿ, ನವೀನ ನಲವಡಿ, ಹಬೀಬ್, ಮುಬಾರಕ್, ಖ್ವಾಜಾ ಮೊಯಿನುದ್ದೀನ್, ಸಮೀರ್ ಖಾನ್, ಮೆಹಬೂಬ್ ಭಾಷಾ, ಹರೀಶ್ ಬಸಾಪುರ, ಕಿಸಾನ್ ಕಾಂಗ್ರೆಸ್ ಘಟಕದಿಂದ ಸುರೇಶ್ ಹಾಗು ತಿಪ್ಪೇಶ್, ಕಾಂಗ್ರೆಸ್ ಕಾರ್ಮಿಕರ ಘಟಕದಿಂದ ಸುಬಾನುಲ್ಲಾ, ಹರೀಶ್, ಮಾರುತಿ ಮುಂತಾದವರು ಉಪಸ್ಥಿತರಿದ್ದರು.

## ಬಿಪಿಎಲ್ : ಹಿಂದಿನ ಆದೇಶವೇ ಅಂತಿಮ

**(1ನೇ ಪುಟದಿಂದ)** ನಾಲ್ಕು ಚಕ್ರದ ಟ್ರ್ಯಾಕ್ಟರ್, ವಾಣಿಜ್ಯ ವಾಹನ, ಟ್ಯಾಕ್ಸಿ ಇತ್ಯಾದಿ ಹೊಂದಿರುವ ಕುಟುಂಬ ಹೊರತುಪಡಿಸಿ, ಉಳಿದಂತೆ ನಾಲ್ಕು ಚಕ್ರದ ವಾಹನ ಹೊಂದಿರುವವರೂ ಬಿಪಿಎಲ್ ವ್ಯಾಪ್ತಿಗೆ ಒಳಪಡುವುದಿಲ್ಲ. ಗುರುತಿಸಲಾದ ಆದ್ಯೇತರ ಕುಟುಂಬಗಳನ್ನು ಹೊರತುಪಡಿಸಿ ಉಳಿದ ಕುಟುಂಬಗಳು ಇಂತಹ ಚೀಟಿ ಪಡೆಯಲು ಅರ್ಹರಾಗಿರುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಜನ್ಮದಿನದ ಶುಭಾಶಯಗಳು



ದಾವಣಗೆರೆ ನಗರಸಭೆ ಮಾಜಿ ಉಪಾಧ್ಯಕ್ಷರೂ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳೂ, ಹಾಲಿ ವಿರೋಧ ಪಕ್ಷದ ನಾಯಕರು, ಜಿಲ್ಲಾ ಆರ್ಯ-ಈಡಿಗರ ಸಂಘದ ಕಾರ್ಯದರ್ಶಿಗಳೂ, ವಿನೋಬನಗರ ಸಾರ್ವಜನಿಕ ಸೇವಾ ಸಮಿತಿ ಅಧ್ಯಕ್ಷರೂ, ನಮ್ಮ ಆತ್ಮೀಯರಾದ

ಶ್ರೀ ಎ. ನಾಗರಾಜ್

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯ ಕೋರುವವರು :

♦ ಮಂಜುನಾಥ್ ಬಿ. ♦ ವೀರೇಶ್ ಮಠದ್
♦ ಸುರೇಶ್ ಬಿ.ಉತ್ತಂಗಿ ♦ ನಾರಾಯಣ್ ರಾವ್ ಕಾಳೆ ಪಿ.ಎಸ್.
♦ ಸಿದ್ದಾರೆಡ್ಡಿ ಬಿ.ವಿ. ♦ ಜಯವಿಭವ, ಶೃತಿ ಮೋಟಾರ್ಸ್


## ಅಲ್ಪಸಂಖ್ಯಾತರಿಗೆ ಶೇ. 12 ರಷ್ಟು ಮೀಸಲಾತಿ ನೀಡಲು ಆಗ್ರಹ

ದಾವಣಗೆರೆ, ಫೆ.15- ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಮತ್ತು ರಾಜಕೀಯವಾಗಿ ಅತ್ಯಂತ ಹಿಂದುಳಿದಿರುವ ಅಲ್ಪಸಂಖ್ಯಾತರಿಗೆ ಶೇ. 12 ರಷ್ಟು ಮೀಸಲಾತಿ ನೀಡುವಂತೆ ಅಲ್ಪಸಂಖ್ಯಾತರ ಹಿತರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಎ.ಆರ್. ಅಯಾಜ್ ಹುಸೇನ್ ಒತ್ತಾಯಿಸಿದ್ದಾರೆ.

ಅಲ್ಪಸಂಖ್ಯಾತರ ಸರ್ವತೋಮುಖ ಅಭಿವೃದ್ಧಿಗೆ ಮೀಸಲಾತಿ ನೀಡದೇ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಸರ್ಕಾರವನ್ನು ಆಗ್ರಹಿಸಿದರು. ನೆನೆಗುದಿಗೆ ಬಿದ್ದಿರುವ ಸಾಚಾರ್ ಹಾಗೂ ಡಾ. ರಂಗನಾಥ್ ಮಿಶ್ರ ವರದಿ ಜಾರಿಗೊಳಿಸಬೇಕು. ಸರ್ಕಾರ ಅಲ್ಪಸಂಖ್ಯಾತರಿಗೆ ನಿಗದಿಪಡಿಸಿದ ಅನುದಾನವನ್ನು ಕಡಿತಗೊಳಿಸಿದೆ. 2018 ರಿಂದ ಇದುವರೆಗೂ ವಿದ್ಯಾರ್ಥಿ ವೇತನ ನೀಡದೇ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಕ್ರಿಯಾ, ಮಹಮ್ಮದ್ ಜಿಯಾವುಲ್ಲಾ, ಹೆಚ್.ಸಿ. ದಾದಾಪೀರ್, ಎಂ. ದಾದಾಪೀರ್, ಡೋ. ಅಸ್ಲಂಖಾನ್ ಮತ್ತಿತರರಿದ್ದರು.

## ಲಿಂಗರಾಜು ಅವರಿಗೆ ಭಾವಚಿತ್ರ ಕೊಡುಗೆ



ದಾವಣಗೆರೆ, ಫೆ.15- ಕುವೆಂಪು ಕನ್ನಡ ಭವನದಲ್ಲಿ ಶಿಕ್ಷಣ ಸಿರಿ ಹೆಚ್.ಕೆ. ಲಿಂಗರಾಜು ಅವರ ಅಭಿನಂದನಾ ಗ್ರಂಥ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಚಿತ್ರಕಲಾ ಶಿಕ್ಷಕ ಸಿ. ರಮೇಶ್ ಕಟ್ಟಿಮನಿ ಹಿರೇತೊಗಲೇರಿ ಅವರು ಹೆಚ್.ಕೆ. ಲಿಂಗರಾಜು ಅವರ ಭಾವಚಿತ್ರವನ್ನು ಪೆನ್ಸಿಲ್ ಸೇಡ್ ಮುಖಾಂತರ ರಚಿಸಿ, ನೀಡಲಾಯಿತು. ಐರಣಿ ಶೆಟ್ರು, ಮುರುಘರಾಜೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಜನ್ಮದಿನದ ಶುಭಾಶಯಗಳು



ದಾವಣಗೆರೆ ನಗರಸಭೆ ಮಾಜಿ ಉಪಾಧ್ಯಕ್ಷರೂ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳೂ, ಹಾಲಿ ವಿರೋಧ ಪಕ್ಷದ ನಾಯಕರು, ಜಿಲ್ಲಾ ಆರ್ಯ-ಈಡಿಗರ ಸಂಘದ ಕಾರ್ಯದರ್ಶಿಗಳೂ, ವಿನೋಬನಗರ ಸಾರ್ವಜನಿಕ ಸೇವಾ ಸಮಿತಿ ಅಧ್ಯಕ್ಷರೂ, ನಮ್ಮ ಆತ್ಮೀಯರಾದ

ಶ್ರೀ ಎ. ನಾಗರಾಜ್

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯ ಕೋರುವವರು :

ಹಿರೇಮಠ್ ವಂಶಸ್ಥರು
ಶ್ರೀ ವೀರೇಶ್ ಕಾರ್ ಡೆಕೋರ್
ಎಂಸಿಸಿ 'ಬಿ' ಬ್ಲಾಕ್, ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ.



ದಿ॥ ಪರಮೇಶ್ವರಯ್ಯ ಪರಶುರಾಮಯ್ಯ ವೀರೇಶ್ ಕೊಟ್ರೇಶ್

ಜನ್ಮದಿನದ ಶುಭಾಶಯಗಳು



ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕರೂ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳೂ, ನಮ್ಮ ಆತ್ಮೀಯರೂ ಆದ

ಶ್ರೀ ಎ. ನಾಗರಾಜ್

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ಶ್ರೀಮತಿ ಆಶಾ ಉಮೇಶ್
ಮಹಾನಗರ ಪಾಲಿಕೆ ಸದಸ್ಯರು
15ನೇ ವಾರ್ಡ್, ದಾವಣಗೆರೆ.

ಶ್ರೀ ಉಮೇಶ್
ಕಾಂಗ್ರೆಸ್ ಮುಖಂಡರು
ದಾವಣಗೆರೆ.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

## ದರ್ಶನ್ ರಾಯಭಾರಿ

**(1ನೇ ಪುಟದಿಂದ)** ಯನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ. ಯಾವುದೇ ಸಂಭಾವನೆ ಪಡೆಯದೇ ಕೃಷಿ ಇಲಾಖೆಯ ಪ್ರಚಾರ ರಾಯಭಾರಿಯಾಗಿ ಕೆಲಸ ನಿರ್ವಹಿಸಲು ನಟ ದರ್ಶನ್ ಒಪ್ಪಿಕೊಂಡಿದ್ದಾರೆ.

ಸ್ವತಃ ಕೃಷಿಕರೂ ಆಗಿರುವ ದರ್ಶನ್ ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರೊಂದಿಗೆ ಚರ್ಚಿಸಿ, ತಮ್ಮ ಮನದಿಂಗಿತವನ್ನು ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಸರ್ಕಾರ ಕೃಷಿ ಇಲಾಖೆಯ ಪ್ರಚಾರ ರಾಯಭಾರಿಯನ್ನಾಗಿ ದರ್ಶನ್ ಅವರನ್ನು ನೇಮಿಸಿದೆ.

## ಉದ್ಯೋಗ ಮೇಳ ಮುಂದೂಡಿಕೆ

ದಾವಣಗೆರೆ, ಫೆ.15- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಹೊನ್ನಾಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇದೇ ದಿನಾಂಕ 18 ರಂದು ನಡೆಸಲುದ್ದೇಶಿಸಿದ್ದ ಉದ್ಯೋಗ ಮೇಳವನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಮುಂದಿನ ದಿನಾಂಕವನ್ನು ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗೆ 08192-259446, 63615 50016, 97436 36369 74063 23294 ಸಂಪರ್ಕಿಸಬಹುದೆಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಕೆ.ಎನ್. ಗಿರೀಶ್ ತಿಳಿಸಿದ್ದಾರೆ.

ಶಾಕೀರ ಗಾರ್ಮೆಂಟ್ಸ್ ಫ್ಯಾಕ್ಟ್ರಿ
SHAKEERA GARMENTS FACTORY
200 ಜನ ಅನುಭವವುಳ್ಳ ಟೈಲರ್ಸ್ ಹಾಗೂ ಸಹಾಯಕರು ಬೇಕಾಗಿದ್ದಾರೆ. ಹೊಸಬರಿಗೂ ತರಬೇತಿ ಕೊಡಲಾಗುವುದು. PF/ESI ಸೌಲಭ್ಯವಿರುತ್ತದೆ.
Wanted 200 Tailors & Helpers
Plot No. 57A, Karuru Industrial Area,
D.C. Office Main Road, Davanagere.
97434 46516, 70198 38653

ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಸಿಜೆಎಂ ಶಿವಮೊಗ್ಗ.

ಅಸಲು ದಾವೆ ಸಂಖ್ಯೆ 155/2019

ವಾದಿ ಹೇಮಂತ ಕುಮಾರ್ ಬಿನ್ ನರಸಿಂಹಯ್ಯ, ಸುಮಾರು 33 ವರ್ಷ, ವಾಸ : "ಲಕ್ಷ್ಮೀನರಸಿಂಹ ಕೃಪ", ಬೈಪಾಸ್ ರಸ್ತೆ, ಟೊಯಾಟ ಶೋರೂಂ ಹತ್ತಿರ, ಶಿವಮೊಗ್ಗ. -ವಿರುದ್ಧ- ಪ್ರತಿವಾದಿ 1) ಹೆಚ್. ಆರ್. ಲಿಂಗಸ್ವಾಮಿ, ಪೌತಿ ವಾರಸುದಾರರುಗಳು 1 ಸಿ) ಶ್ರೀಮತಿ ಜ್ಯೋತಿ ಬಿನ್ ದಿ. ಹೆಚ್.ಆರ್. ಲಿಂಗಸ್ವಾಮಿ, ಸುಮಾರು 42 ವರ್ಷ, ವಾಸ : "ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ", ಶ್ರೀ ಸಾಯಿ ಸದನ" ನಂ. 900/ಎ6, ಶಕ್ತಿ ನಗರ, ದಾವಣಗೆರೆ.

ತಿಳುವಳಿಕೆ

ಮೇಲ್ಕಂಡ ವಾದಿಯು ಮೇಲೆ ತಿಳಿಸಿದ ಪ್ರತಿವಾದಿಯ ವಿರುದ್ಧ ಹಣ ವಸೂಲಾತಿ ಪರಿಹಾರವನ್ನು ಕೋರಿ ಪ್ರತಿವಾದಿಯ ವಿರುದ್ಧ ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ : 155/2019 ರಂತೆ ದಾವೆ ಹೂಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯದಿಂದ ಎದುರುದಾರರುಗಳಾದ 1) ಸಿ. ಶ್ರೀಮತಿ ಜ್ಯೋತಿ ಬಿನ್ ದಿ.ಹೆಚ್.ಆರ್. ಲಿಂಗಸ್ವಾಮಿ ಸುಮಾರು 42 ವರ್ಷ ಎಲ್ಲರೂ ವಾಸ : 'ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ', 'ಶ್ರೀ ಸಾಯಿ ಸದನ' ನಂ. 900/ಎ6, ಶಕ್ತಿ ನಗರ, ದಾವಣಗೆರೆ ನಿಮಗೆ ರಿಜಿಸ್ಟರ್ ಅಂಚೆ ಹಾಗೂ ಇತರೆ ಮೂಲಕ ಕಳುಹಿಸಲಾಗಿರುವ ಸಮನ್ಸ್ ನಿಮಗೆ ಜಾರಿಯಾಗದೇ ವಾಪಾಸ್ ಬಂದಿರುತ್ತದೆ. ಈ ಪ್ರಕರಣದಲ್ಲಿ ನಿಮಗೆ ದಾವಾ ಸಮನ್ಸ್ ಜಾರಿಯಾಗದೇ ವಾಪಾಸ್ ಬಂದಿರುತ್ತದೆ. ಈ ಪ್ರಕರಣದಲ್ಲಿ ನಿಮಗೆ ದಾವಾ ಸಮನ್ಸ್ ಜಾರಿಯಾಗಬೇಕಾಗಿರುತ್ತದೆ. ಆದ್ದರಿಂದ ಈ ಮೇಲ್ಕಂಡ ಪ್ರಕರಣದ ಮುಂದಿನ ವಿಚಾರಣಾ ದಿ. 20.03.2021 ರಂದು ಬೆಳಿಗ್ಗೆ 11.00 ಗಂಟೆಗೆ ಇದ್ದು, ಸರಿಯಾಗಿ ನೀವು ಖುದ್ದಾಗಿಯಾಗಲೀ ಇಲ್ಲವೇ ನಿಮ್ಮ ಪರ ನ್ಯಾಯವಾದಿಯ ಮೂಲಕವಾಗಲೀ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು ಎಂದು ಈ ಪತ್ರಿಕಾ ಪ್ರಕಟಣೆಯ ಮೂಲಕ ಎದುರುದಾರರಾದ ನಿಮಗೆ ತಿಳುವಳಿಕೆಯನ್ನು ನೀಡಲಾಗಿದೆ. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಈ ಮೇಲ್ಕಂಡ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ತಿಳಿಯಿರಿ.

ವಾದಿಯರ ಪರ ನ್ಯಾಯವಾದಿ
S.N. ರಾಜೇಶ್ ಶಾಸ್ತ್ರಿ, ನ್ಯಾಯವಾದಿ ನಂ. 2074, SPM.ರಸ್ತೆ, ಶಿವಮೊಗ್ಗ. ಸ್ಥಳ : ಶಿವಮೊಗ್ಗ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/- ಶಿರಸ್ತೇದಾರರು, ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ & CJM ಕೋರ್ಟ್, ಶಿವಮೊಗ್ಗ.

ಜನ್ಮದಿನದ ಶುಭಾಶಯಗಳು



ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕರೂ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳೂ, ಜಿಲ್ಲಾ ಆರ್ಯ-ಈಡಿಗರ ಸಂಘದ ಕಾರ್ಯದರ್ಶಿಗಳೂ, ವಿನೋಬನಗರ ಸಾರ್ವಜನಿಕ ಸೇವಾ ಸಮಿತಿ ಅಧ್ಯಕ್ಷರೂ, ನನ್ನ ಆತ್ಮೀಯರೂ ಆದ

ಶ್ರೀ ಎ. ನಾಗರಾಜ್

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು

ಬಾತಿ ಶಿವಕುಮಾರ್
ಸದಸ್ಯರು, ಗ್ರಾಮ ಪಂಚಾಯಿತಿ, ದೊಡ್ಡಬಾತಿ.
ಉತ್ತರ ವಿಧಾನಸಭಾ ಕ್ಷೇತ್ರದ ಸಾಮಾಜಿಕ ಜಾಲತಾಣದ ಅಧ್ಯಕ್ಷರು,
ಜಿಲ್ಲಾ ಕಿಸಾನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ.

ಜನ್ಮದಿನದ ಶುಭಾಶಯಗಳು



ದಾವಣಗೆರೆ ನಗರಸಭೆ ಮಾಜಿ ಉಪಾಧ್ಯಕ್ಷರು, ಮಹಾನಗರ ಪಾಲಿಕೆ ಕಾರ್ಪೊರೇಟರ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳೂ, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕರೂ, ಜಿಲ್ಲಾ ಆರ್ಯ ಈಡಿಗರ ಸಂಘದ ಕಾರ್ಯದರ್ಶಿಗಳೂ ವಿನೋಬನಗರ ಸಾರ್ವಜನಿಕ ಸೇವಾ ಸಮಿತಿ ಅಧ್ಯಕ್ಷರೂ ಆದ

ಶ್ರೀಯುತ ಎ. ನಾಗರಾಜ್

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು...

ಕೆ.ಎಂ. ಹರೀಶ್
ಕ್ಲಾಸ್ I ಕಾಂಟ್ರ್ಯಾಕ್ಟರ್
ದಾವಣಗೆರೆ.

ಆರ್. ಮಲ್ಲಿಕಾರ್ಜುನ್
ಪವನ್ ಗಾಂಧಿ
ಮ್ಯೂಜಿಕ್ಸ್, ದಾವಣಗೆರೆ.

ಸಿಟಿ ಸ್ಟಾರ್ ವಾಲಿಬಾಲ್ ಕ್ಲಬ್, ದಾವಣಗೆರೆ

17TH ANNIVERSARY Hero
17ನೇ ವರ್ಷದ ಸಂಭ್ರಮದಲ್ಲಿ
ಪ್ರಕಾಶಾ ಮೋಟರ್ಸ್
ಕಳೆದ 16 ವರ್ಷಗಳ ಅವಧಿಯಲ್ಲಿ ಗ್ರಾಹಕರು ಕೊಟ್ಟ-ಕೊಡುತ್ತಿರುವ ಸಹಕಾರದಿಂದ ಇಂದು ಬೃಹತ್ ಉದ್ಯಮವಾಗಿ ಬೆಳವಣಿಗೆಯಾಗಿದೆ. ಕಾರಣಕರ್ತರಾದ ತಮ್ಮೆಲ್ಲರಿಗೂ ಪ್ರಕಾಶಾ ಮೋಟರ್ಸ್ ಚಿರಋಣಿ.



ಹೀರೋ ಹಾಗೂ ಪ್ರಕಾಶಾ ಮೋಟರ್ಸ್ ಗ್ರಾಹಕರ ನಂಬಿಗೆಯ ಪ್ರತೀಕವಾಗಿವೆ.
ಹೀರೋ ಮೋಟೋಕಾರ್ಪ್ ಅಧಿಕೃತ ಡೀಲರ್ಸ್
ಪ್ರಕಾಶಾ ಮೋಟರ್ಸ್
(ಅಂಬರ್‌ಕರ್ ಸಮೂಹ ಸಂಸ್ಥೆ)
ನಂ.1945/41, ಉಮಾಪತಿ ಆರ್ಕೇಡ್, ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಹತ್ತಿರ, ಹರಿಹರ ರಸ್ತೆ, ದಾವಣಗೆರೆ-06. ಫೋ: 272134/35, ಮೊ.: 9449865565, 9513353836
PRAKASHA MOTORS
(A UNIT OF AMBERKAR GROUP)



## ನಿಲ್ದಾಣವಿದ್ದರೂ ನಿಲ್ಲದ ಬಸ್

ದಾವಣಗೆರೆ : ನಗರದ ಹದಡಿ ರಸ್ತೆಯಲ್ಲಿರುವ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪದ ಪಕ್ಕ ಸ್ಮಾರ್ಟ್ ಸಿಟಿಯ ಬಸ್ ನಿಲ್ದಾಣ ರೂಪಿಸಲಾಗಿದೆ. ಆದರೂ, ಐಟಿಐ ಕಾಲೇಜಿನ ಎದುರು ಬಸ್ ನಿಲ್ಲಿಸಲಾಗುತ್ತಿದೆ. ಸಿಗ್ನಲ್ ಸಹ ಇಲ್ಲೇ ಇರುವ ಕಾರಣ ಸಂಚಾರಕ್ಕೆ ಅಡ್ಡಿ ಎದುರಾಗುತ್ತಿದೆ.

# ಅನರ್ಹರು ಬಿಪಿಎಲ್ ರದ್ದುಪಡಿಸಲು ಅವಕಾಶ

### ಇಲ್ಲವಾದಲ್ಲಿ ಕಾನೂನು ಕ್ರಮ : ಡಿಸಿ

ದಾವಣಗೆರೆ, ಫೆ.15- ಅನರ್ಹರು ಹೊಂದಿರುವ ಆದ್ಯತಾ (ಬಿಪಿಎಲ್)ವರ್ಗದ ಪಡಿತರ ಚೀಟಿಗಳನ್ನು ರದ್ದುಪಡಿಸಲು ಅವಕಾಶ ಕಲ್ಪಿಸಲಾಗಿದ್ದು, ರದ್ದು ಪಡಿಸದೇ ಹೋದಲ್ಲಿ ಕಾನೂನು ರೀತ್ಯಾ ಕ್ರಮ ವಹಿಸಲಾಗುವುದು.

ಸರ್ಕಾರಿ ನೌಕರರು ವೇತನವನ್ನು ಗಣನೆಗೆ ತೆಗೆದು ಕೊಳ್ಳದೆ ಎಲ್ಲಾ ಖಾಸಗಿ ನೌಕರರು, ಸರ್ಕಾರಿ ಅನುದಾನಿತ ನೌಕರರು, ನಿಗಮಗಳು, ಮಂಡಳಿಗಳು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ, ಸೇವಾ ತೆರಿಗೆ, ವ್ಯಾಟ್ ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬ ಗಳು ಹಾಗೂ ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿ ರುವ ಕುಟುಂಬಗಳು, ನಗರ ಪ್ರದೇಶದಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವವರು ಮತ್ತು ಜೀವನೋಪಾಯ ಕ್ಕಾಗಿ ಸ್ವತಃ ಓಡಿಸುವ ವಾಣಿಜ್ಯ ವಾಹನಗಳಾದ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿರುವ ಕುಟುಂಬಗಳ ವಾರ್ಷಿಕ ಆದಾಯ ರೂ 1.20 ಲಕ್ಷಕ್ಕಿಂತಲೂ ಹೆಚ್ಚು ಇರುವ ಕುಟುಂಬಗಳು, ಒಂದೇ ಕುಟುಂಬದಲ್ಲಿದ್ದು ಒಟ್ಟಿಗೆ ವಾಸಿಸುತ್ತಿದ್ದರೂ ಪ್ರತ್ಯೇಕ ಪಡಿತರ ಚೀಟಿ ಹೊಂದಿರುವವರು ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿರುವುದು ಕಾನೂನು ಬಾಹಿರವಾಗಿರುತ್ತದೆ.

ಅನರ್ಹರು ತಾವು ಹೊಂದಿರುವ ಆದ್ಯತಾ (ಬಿಪಿಎಲ್) ವರ್ಗದ ಪಡಿತರ ಚೀಟಿಗಳನ್ನು ತಾಲ್ಲೂಕು ಕಚೇರಿಯಲ್ಲಿರುವ ಆಹಾರ ಶಿರಸ್ತೇದಾರ್ ಅಥವಾ ಆಹಾರ ನಿರೀಕ್ಷಕರುಗಳನ್ನು ಸಂಪರ್ಕಿಸಿ ತಾವು ಹೊಂದಿರುವ ಆದ್ಯತಾ (ಬಿಪಿಎಲ್) ವರ್ಗದ ಪಡಿತರ ಚೀಟಿಗಳನ್ನು ಆದ್ಯತಾ (ಬಿಪಿಎಲ್) ಚೀಟಿಗಳನ್ನು ರದ್ದುಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಹೀಗೆ ತಾವೇ ಸ್ವತಃ ಪಡಿತರ ಚೀಟಿಗಳನ್ನು ಹಿಂತಿರುಗಿಸಿದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ. ನಂತರ ಇಲಾಖೆಯೇ ಕಾರ್ಯಚರಣೆ ನಡೆಸಿ ಅನರ್ಹರು ಹೊಂದಿರುವ ಆದ್ಯತಾ (ಬಿಪಿಎಲ್) ವರ್ಗದ ಪಡಿತರ ಚೀಟಿಗಳನ್ನು ಪತ್ತೆಹಚ್ಚಿದಲ್ಲಿ, ಪತ್ತೆಹಚ್ಚಿದ ದಿನಾಂಕದವರೆಗೆ ತಾವು ಪಡೆದ ಪಡಿತರ ಪದಾರ್ಥಗಳವಾರು ಪ್ರತಿ ಕೆ.ಜಿ.ಗೆ ಮುಕ್ತ ಮಾರುಕಟ್ಟೆ ಬೆಲೆಯ ಅನುಸಾರ ಹಣವನ್ನು ವಸೂಲಿ ಮಾಡಲಾಗುವುದು. ಜೊತೆಗೆ ದಿ ಕರ್ನಾಟಕ ಪ್ರಿವೆನ್ಷನ್ ಆಫ್ ಅನ್ ಆಥರೈಜ್ಡ್ ಪೊಸೆಷನ್ ಆಫ್ ರೇಷನ್ ಕಾರ್ಡ್ ಆರ್ಡರ್ 1977ರ ರೀತ್ಯಾದ ಪ್ರಕಾರ ಕ್ರಮ ವಹಿಸಲಾಗುವುದು ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

ಈ ಹಿನ್ನೆಲೆಯಲ್ಲಿ ಅನರ್ಹರು ತಾವು ಹೊಂದಿರುವ ಆದ್ಯತಾ (ಬಿಪಿಎಲ್) ವರ್ಗದ ಪಡಿತರ ಚೀಟಿಗಳನ್ನು ಸರ್ಕಾರಕ್ಕೆ ವಾಪಸ್ ನೀಡಿ ಕಾನೂನು ಕ್ರಮದಿಂದ ವಿಮುಕ್ತಿ ಹೊಂದಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

### ನಾಳೆಯಿಂದ 19 ರವರೆಗೆ ದೇವರಾಜ ಅರಸು ಬಡಾವಣೆಯ

# ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ 23ನೇ ವಾರ್ಷಿಕೋತ್ಸವ, 19 ರಂದು ರಥೋತ್ಸವ



### ತುಲಾಭಾರ ಸೇವೆ

ಶ್ರೀ ಮಾತಾ ಅನ್ನಪೂರ್ಣೇಶ್ವರಿ ಸನ್ನಿಧಾನದಲ್ಲಿ ಭಕ್ತರು ತಮ್ಮ ಕೋರಿಕೆ ಪೂರೈಸಿಕೊಳ್ಳಲು 'ತುಲಾಭಾರ' ಮಾಡಿಸುವ ವ್ಯವಸ್ಥೆ ಮಾಡಲಾಗಿದೆ.
- ಆರ್.ಜಿ. ನಾಗೇಂದ್ರ ಪ್ರಕಾಶ್

ದಾವಣಗೆರೆ, ಫೆ.15- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ 23ನೇ ವಾರ್ಷಿಕೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 17 ರಿಂದ 19 ರವರೆಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಮಾತಾ ಅನ್ನಪೂರ್ಣೇಶ್ವರಿ ಅಮ್ಮನವರ ದೇವಸ್ಥಾನದ, ಶ್ರೀ ವಿನಾಯಕ ಸೇವಾ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರಪ್ರಕಾಶ್ ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವದ ಪ್ರಯುಕ್ತ ನಾಡಿದ್ದು ದಿನಾಂಕ 17 ರಂದು ಬೆಳಿಗ್ಗೆ 7.10 ರಿಂದ ಪ್ರಾರ್ಥನೆ, ಗಂಗಾ ಪೂಜೆ, ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ ವಾಚನ, ದೇವನಾಂದಿ, ಮಂಟಪ ಪೂಜೆ, ಗಣಪತಿ, ಸುಬ್ರಹ್ಮಣ್ಯ, ದತ್ತಾತ್ರೇಯ, ನಾಗಲಿಂಗೇಶ್ವರ, ಸತ್ಯನಾರಾಯಣ, ಆಂಜನೇಯ ಸ್ವಾಮಿ ಹಾಗೂ ನವಗ್ರಹ ದೇವರುಗಳಿಗೆ ಅಭಿಷೇಕ ನಡೆಯಲಿದೆ.

ಶ್ರೀ ಮಾತಾ ಅನ್ನಪೂರ್ಣೇಶ್ವರಿ ಅಮ್ಮನವರಿಗೆ ಅಭಿಷೇಕ, ಶ್ರೀ ನವಗ್ರಹ ಪುರಸ್ಸರ ಸಹಸ್ರ ಮೋದಕ ಗಣಪತಿ ಹೋಮ, ಮಂತ್ರ, ಪುಷ್ಪ, ಪಾಲಕಿ ಉತ್ಸವ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗವಿದೆ ಎಂದರು.

ಇದೇ ದಿನಾಂಕ 18 ರಂದು ಬೆಳಿಗ್ಗೆ 8 ರಿಂದ ಎಂದಿನಂತೆ ಪ್ರಧಾನ, ಶ್ರೀ ಮಾತಾ ಅನ್ನಪೂರ್ಣೇಶ್ವರಿಯನ್ನು ಮೊದಲ್ಗೊಂಡು ಎಲ್ಲಾ ದೇವರುಗಳಿಗೆ ಅಭಿಷೇಕ, ಸುಹಾಸಿನಿಯರಿಂದ ಕುಂಕುಮಾರ್ಚನೆ, ಪಠಣ, ಶೀಲಾ ನಟರಾಜ್ ಮತ್ತು ಸಂಗಡಿಗರಿಂದ ಶ್ರೀ ಮಹಾಗಣಪತಿ, ನವಗ್ರಹ ಪುರಸ್ಸರ ಶ್ರೀ ಲಲಿತಾ ಪರಮೇಶ್ವರಿ ಹೋಮ, ಪೂರ್ಣಾಹುತಿ, ಪಾಲಕಿ ಉತ್ಸವ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದವಿದೆ.

ದಿನಾಂಕ 19 ರಂದು ಬೆಳಿಗ್ಗೆ 11.30 ಗಂಟೆಗೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ ಜರುಗಲಿದೆ. ಇದಕ್ಕೂ ಮುನ್ನ ಶ್ರೀ ಮಹಾಗಣಪತಿ ಪೂಜೆ, ರಥಸಪ್ತಮಿ ಪ್ರಯುಕ್ತ ಶ್ರೀ ಸೂರ್ಯನಾರಾ ಯಣ ಪೂಜೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವದ ಅಂಗವಾಗಿ ಹೋಮಾದಿಗಳು, ರಥಕ್ಕೆ ಕುಂಬಾಭಿಷೇಕ, ಬಲಿ ಪ್ರದಾನ, ರಥಾಲಂಕಾರ, ಶ್ರೀ ಮಾತಾ ಅನ್ನಪೂರ್ಣೇಶ್ವರಿ ಅಮ್ಮನವರ ಚರಮೂರ್ತಿಯೊಂದಿಗೆ ರಥೋತ್ಸವ, ಮಹಾದ್ವಾರ ಪ್ರದಕ್ಷಿಣೆ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗವಿದೆ.

ಮಾಜಿ ಸಚಿವರಾದ ಡಾ. ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ಸಂಸದ ಜಿ.ಎಂ. ಸಿದ್ದೇಶ್ವರ ಮತ್ತಿತರೆ ಗಣ್ಯರು ರಥೋತ್ಸವ ಕಾರ್ಯ್ರಮಗಳಲ್ಲಿ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

**ಭಜನಾ ಕಾರ್ಯಕ್ರಮ :** ದಿನಾಂಕ 17 ರಂದು ಕಾಳಿಕಾದೇವಿ ಹಾಗೂ ವಾಗ್ದೇವಿ ಮಹಿಳಾ ಮಂಡಳಿಯವರಿಂದ, ಇದೇ ದಿನಾಂಕ 18 ರಂದು ಶ್ರೀದೇವಿ ವೃಂದದವರಿಂದ ಮತ್ತು 19 ರಂದು ಶ್ರೀ ವಾಸವಿ ವನಿತೆಯರ ಸಮಾಜದಿಂದ ಭಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

**ಮಹಿಳಾ ಸಂಘ ಅಸ್ತಿತ್ವಕ್ಕೆ :** ಶ್ರೀ ಮಾತಾ ಅನ್ನಪೂರ್ಣೇಶ್ವರಿ ಮಹಿಳಾ ಸಂಘವನ್ನು ಅಸ್ತಿತ್ವಕ್ಕೆ ತರಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಸೇವಾ ಸಮಿತಿ ಪದಾಧಿಕಾರಿಗಳಾದ ತಾತಾ ವೆಂಕಟಾಚಲಪತಿ ಶೆಟ್ರು, ವೈ.ಬಿ. ಸತೀಶ್, ಬಿ.ಹೆಚ್. ಸತೀಶ್, ಪ್ರಕಾಶ್ ಪಾಟೀಲ್, ವೀರಯ್ಯ, ನಾಗಭೂಷಣ, ಕೆ.ಎಸ್. ಕಡೆಕೊಪ್ಪ ಉಪಸ್ಥಿತರಿದ್ದರು.

# 33 ಕೋಟಿ ದೇವತೆಗಳನ್ನು ಹೊಂದಿ, ಐಕ್ಯತೆ ಒಳಗೊಂಡ ಅಪರೂಪದ ರಾಷ್ಟ್ರ ಭಾರತ

### ಹರಪನಹಳ್ಳಿಯಲ್ಲಿ ಉಜ್ಜಯಿನಿ ಶ್ರೀ



ಹರಪನಹಳ್ಳಿ, ಫೆ.15- ಭಾರತ 33ಕೋಟಿ ದೇವತೆಗಳನ್ನು ಹೊಂದಿ ರುವ ಐಕ್ಯತೆಯನ್ನು ಒಳಗೊಂಡ ಅಪರೂಪದ ರಾಷ್ಟ್ರವಾಗಿದೆ ಎಂದು ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ನಟರಾಜ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ವರಸಿದ್ಧಿ ವಿನಾಯಕ ಮೂರ್ತಿ ಪ್ರತಿಷ್ಠಾಪನೆ ಹಾಗೂ ಅಷ್ಟಬಂಧ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಯಾರಲ್ಲಿ ಸಂಪತ್ತು, ಅಧಿಕಾರವಿದೆಯೋ ಅವರ ಸುತ್ತ ಜನ ತಿರುಗುತ್ತಾರೆ. ಶ್ರೇಷ್ಠವಾದ ಗುಣಮಟ್ಟ ಅಂದರೆ ವಿನಯವಂತ, ವಿದ್ಯಾವಂತ, ಯೋಗ್ಯವಾದ ಲಕ್ಷಣ ಹೊಂದಿದ ವ್ಯಕ್ತಿಯನ್ನು ಸಮಾಜ, ಧರ್ಮ, ದೈವ, ವೇದಿಕೆಗಳಿಂದ ಗೌರವಿಸುತ್ತದೆ. ಯಾವುದೇ ಪರಿಮಿತಿ, ಚೌಕಟ್ಟು ಇಲ್ಲದೆ ಎಲ್ಲಾ ವರ್ಗದವರು ಸರ್ವ ಜನಾಂಗದವರು ಪೂಜಿಸುವಂತಹ ಎರಡು ದೇವರಿವೆ ಅವು ಗಣಪತಿ ಮತ್ತು ಆಂಜನೇಯ ಸ್ವಾಮಿ ಎಂದು ಹೇಳಿದರು.

ಲಂಚ ಕೊಡುವುದು, ಪಡೆಯುವುದು ತಪ್ಪು ಎನ್ನುವ ಭಾವನೆ ಇದೆ. ಎಲ್ಲಿಯವರೆಗೆ ಲಂಚ ಕೊಡುವವರು ಇರುತ್ತಾರೋ ಅಲ್ಲಿಯವರೆಗೂ ತೆಗೆದುಕೊಳ್ಳುವವರೂ ಇರುತ್ತಾರೆ. ಯಾವಾಗ ಮತಗಳನ್ನು ಮಾರಿಕೊಳ್ಳುವುದು ತಪ್ಪುತ್ತದೋ ಅಲ್ಲಿಯವರೆಗೂ ಉತ್ತಮ ಗುಣವುಳ್ಳವರು ಸಿಗುವುದಿಲ್ಲ ಎಂದು ಹೇಳಿದರು.

ಉತ್ತಮ ಚಾರಿತ್ರ್ಯಕ್ಕೆ ಆದ್ಯತೆ ಇರುತ್ತದೆ. ಸ್ಥಾನಮಾನ ಹುಡುಕಿಕೊಂಡು ಬರುತ್ತದೆ ಇದಕ್ಕೆ ಗಣಪತಿ, ಆಂಜನೇಯ ದೇವರು ಸಾಕ್ಷಿಯಾಗಿದ್ದಾರೆ ಎಂದರು.

ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕೇವಲ ಒಂದು ಕ್ಷೇತ್ರವಲ್ಲದೆ ಗ್ರಾಮೀಣ ಪ್ರದೇಶ ಒಳಗೊಂಡು ದೇಶದಲ್ಲಿ ಶೈಕ್ಷಣಿಕ, ರಾಜಕೀಯ, ಸಾಮಾಜಿಕ, ಆರ್ಥಿಕವಾಗಿ ಕುಸಿದಿವೆ.

1 ವರ್ಷ ಕಾಲ ದೇಶದಲ್ಲಿ ಶೇ.1ರಷ್ಟು ಕೊರೊನಾ ಸೋಂಕಿಗೆ ಒಳಗಾಗಿದ್ದೇವೆ ಎಂದರೆ ಅದು ಧರ್ಮ, ದೇವರ, ಗುರುವಿನ ಮೇಲೆ ಇಟ್ಟಿರುವ ನಂಬಿಕೆಯಾಗಿದೆ. ಮಾರ್ಚ್ 23ರಲ್ಲಿ ಕೊರೊನಾ ಸೋಂಕು ಆವರಿಸಿತ್ತು.

ಇಂತಹ ಸಂಕಷ್ಟದ ಸಂದರ್ಭದಲ್ಲಿ ನಟರಾಜ ಬಡಾವಣೆಯ ಜನರು ತೆಗೆದುಕೊಂಡ ತೀರ್ಮಾನದಂತೆ ಇಂದು ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನ ಇಂದು ನಿರ್ಮಾಣವಾಗಿ ನಿರ್ವಿಘ್ನವಾಗಿ ನಡೆದಿರುವುದು ಪವಾಡವೇ ಸರಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್, ಶ್ರೀ ವರಸಿದ್ಧಿ ವಿನಾಯಕ ಸೇವಾ ಸಮಿತಿ ಅಧ್ಯಕ್ಷ ಯು.ಪಿ. ನಾಗರಾಜ, ತೆಗ್ಗಿನಮಠ ಸಂಸ್ಥೆ ಕಾರ್ಯದರ್ಶಿ ಟಿ.ಎಂ.ಚಂದ್ರಶೇಖರಯ್ಯ, ಪೂಜಾರ ಚಂದ್ರಶೇಖರ್, ವೇದ ಮೂರ್ತಿಗಳಾದ ಯು. ಶಂಕರ ನಾರಾಯಣಭಟ್ ಉಪ್ಪುಂದ, ಎಂ. ಕೃಷ್ಣಭಟ್, ಕೆ.ಶಿವಾನಂದಪ್ಪ, ರಾಜು ಇಜಂತಕರ್, ಹಂಸರಾಜ್ ಡಿ ಪಾಟೀಲ್, ಟಿ.ನೂರುದ್ದೀನ್, ಹೆಚ್.ಚನ್ನನಗೌಡ ದೊಡ್ಡಮನಿ, ಕೆ.ಬಸವರಾಜ, ಶ್ರೀನಿವಾಸ ಪಟಗೆ, ಹೆಚ್.ವಾಗೀಶ್, ಜಿ.ಎನ್. ಬಸವರಾಜ, ಎಂ.ಸುನೀತಾ ಈರಣ್ಣ, ಆರ್. ಜ್ವಾಲಾ ಪದ್ಮರಾಜ್ ಜೈನ್, ಹೆಚ್.ಶಾರದ ಸಕ್ರಪ್ಪ, ಪ್ರಸನ್ನಕುಮಾರ ಜೈನ್, ಇಸಿಓ ಮಂಜುನಾಥ ಗಿರಜ್ಜಿ, ಬಿಆರ್‌ಸಿ ಅಣ್ಣಪ್ಪ, ಸಿದ್ದಪ್ಪ, ಇತರರು ಇದ್ದರು.

## ಜಿಲ್ಲಾಡಳಿತದಿಂದ ಶ್ರೀ ಸಂತ ಸೇವಾಲಾಲ್ ಜಯಂತಿ ಸರಳ ಆಚರಣೆ



ದಾವಣಗೆರೆ, ಫೆ.15- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸೋಮವಾರ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು ಅವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸುವ ಮೂಲಕ ಸರಳವಾಗಿ ಆಚರಿಸಲಾಯಿತು.

ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಕೆ.ವಿ ಶಾಂತಕುಮಾರಿ, ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷೆ ಸಾಕಮ್ಮ ಗಂಗಾಧರನಾಯ್ಕ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ಸಮಾಜದ ಮುಖಂಡರಾದ ಮಂಜಾನಾಯ್ಕ ಮತ್ತಿತರು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಸಿರಿಗೆರೆ : 88ರ ವೃದ್ಧೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ

ಸಿರಿಗೆರೆ, ಫೆ. 15- ಚಿಕ್ಕ ಎಮ್ಮಿಗನೂರು ಗ್ರಾಮದ ಸಾಮಾನ್ಯ ಮಹಿಳೆಗೆ ಮೀಸಲಿದ್ದ ಗ್ರಾಮ ಪಂಚಾಯ್ತಿ ಅಧ್ಯಕ್ಷ ಸ್ಥಾನಕ್ಕೆ 88 ವರ್ಷದ ದಾಕ್ಷಾಯಣಮ್ಮ ಆಯ್ಕೆಯಾಗಿದ್ದಾರೆ.

ಆಯ್ಕೆ ಬಳಿಕ ಸಿರಿಗೆರೆ ತರಳಬಾಳು ಜಗದ್ಗುರು ಬೃಹನ್ಮಠಕ್ಕೆ ಭೇಟಿ ನೀಡಿ, ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಆ ಕಾಲದಲ್ಲೇ 8ನೇ ತರಗತಿ ಓದಿದ್ದು, ಇವರಿಗೆ ಕನ್ನಡ, ಇಂಗ್ಲಿಷ್ ಓದಲು ಬರೆಯಲು ಬರುತ್ತದೆ. ಶ್ರೀಗಳು ಈ ವಯಸ್ಸಿನಲ್ಲಿ ಅಧ್ಯಕ್ಷೆಯಾಗಿ ಏನು ಮಾಡುತ್ತೀರೆಂದು ಕೇಳಿದ್ದಕ್ಕೆ, ದಾಕ್ಷಾಯಣಮ್ಮ ಪ್ರತಿಕ್ರಿಯಿಸಿ, ಗ್ರಾಮಕ್ಕೆ ಕುಡಿವ ನೀರು, ಸ್ವಚ್ಛತೆ, ವಿದ್ಯುತ್ ದೀಪ, ರಸ್ತೆ, ಚರಂಡಿ ಸೌಲಭ್ಯ, ಸೂರಿಲ್ಲದವರಿಗೆ ನಿವೇಶನ, ಮನೆ ಸೇರಿ ಅಗತ್ಯ ಸೌಕರ್ಯ ಕಲ್ಪಿಸಲು ಶ್ರಮಿಸುತ್ತೇನೆ. ಸರ್ಕಾರದ ವಿವಿಧ ಇಲಾಖೆಗಳ ಅನುದಾನ ಸದ್ಬಳಕೆ ಮಾಡಿಕೊಂಡು ಗ್ರಾಮವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುತ್ತೇನೆಂದು ಹೇಳಿದರು.

## ನ್ಯಾಮತಿ ತಾಲ್ಲೂಕಿಗೆ ಇಂದು ಎಸಿಬಿ ಅಧಿಕಾರಿಗಳ ಭೇಟಿ

ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಅಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ನ್ಯಾಮತಿ ತಾಲ್ಲೂಕಿನ ತಾಲ್ಲೂಕು ಕಚೇರಿಗೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದು ಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು.

ಸಾರ್ವಜನಿಕರು ತಮ್ಮ ಕುಂದುಕೊರತೆಗಳ ಅರ್ಜಿಗಳನ್ನು ನೀಡಿ ಈ ಭೇಟಿಯ ಸದುಪಯೋಗ ಪಡೆಯಬಹುದಾಗಿದ್ದು, ವಿವರಗಳಿಗೆ ದೂರವಾಣಿ ಸಂಖ್ಯೆ: 08192-236600, 9480997575 ನ್ನು ಸಂಪರ್ಕಿಸಬಹುದೆಂದು ಎಸಿಬಿ ಡಿವೈಎಸ್‌ಪಿ (ಪ್ರಭಾರ) ಜೆ.ಲೋಕೇಶ್ ತಿಳಿಸಿದ್ದಾರೆ.

## ಗ್ರಾಮಾಂತರದಲ್ಲಿ ವಿದ್ಯುತ್ ವ್ಯತ್ಯಯ

ಭರಮಸಾಗರ 56 ಕೆರೆಗಳ ಪೈಪ್‌ಲೈನ್ ಕಾಮಗಾರಿ ನಿರ್ವಹಿಸುವುದರಿಂದ ನಗರದ ಹೊಸ ಮತ್ತು ಹಳೇಕುಂದವಾಡ, ಕೆಹೆಚ್.ಬಿ ಕಾಲೋನಿ, ರಶ್ಮಿ ಸ್ಕೂಲ್, ಸುತ್ತಮುತ್ತ ವ್ಯಾಪ್ತಿಯಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6.30 ವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ರಾಮಮಂದಿರಕ್ಕೆ ದೇಣಿಗೆ ನೀಡಿದವರ ಮನೆಗೆ ಗುರುತು ಆರ್.ಎಸ್.ಎಸ್. ವಿರುದ್ಧ ಕುಮಾರಸ್ವಾಮಿ ಆರೋಪ



ಬೆಂಗಳೂರು, ಫೆ. 15 – ಅಯೋಧ್ಯೆ ರಾಮ ಮಂದಿರಕ್ಕೆ ದೇಣಿಗೆ ನೀಡುವವರ ಮನೆಯನ್ನು ಆರ್.ಎಸ್.ಎಸ್. ಗುರುತು ಹಾಕುತ್ತಿದ್ದು, ಇದು ಜರ್ಮನಿಯಲ್ಲಿ ನಾಜಿಗಳು ವರ್ತಿಸಿದ ರೀತಿಯಲ್ಲಿದೆ ಎಂದು ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಆರೋಪಗಳನ್ನು ತಳ್ಳಿ ಹಾಕಿರುವ ಆರ್.ಎಸ್.ಎಸ್., ಇಂತಹ ಹೇಳಿಕೆಗಳು ಪ್ರತಿಕ್ರಿಯೆಗೆ ಯೋಗ್ಯವಲ್ಲ ಎಂದು ಹೇಳಿದೆ. ಸರಣಿ ಟ್ವೀಟ್ ಮಾಡಿರುವ ಜೆಡಿಎಸ್ ನಾಯಕ ಕುಮಾರಸ್ವಾಮಿ, ಜರ್ಮನಿಯಲ್ಲಿ ನಾಜಿ ಪಾರ್ಟಿ ಆರಂಭ ವಾದ ಸಮಯದಲ್ಲೇ ಆರ್.ಎಸ್.ಎಸ್. ಭಾರತ ದಲ್ಲಿ ಹುಟ್ಟಿ ಕೊಂಡಿತ್ತು. ದೇಣಿಗೆ ನೀಡುವವರು ಹಾಗೂ ನೀಡದವರ ಮನೆಯನ್ನು ಆ ಸಂಘಟನೆ ಗುರುತು ಹಾಕುತ್ತಿದೆ ಎಂದು ಆರೋಪಿಸಿದ್ದಾರೆ. ಈ ಬಗ್ಗೆ ಆರ್.ಎಸ್.ಎಸ್. ಮಾಧ್ಯಮದ ಉಸ್ತುವಾರಿ ಇ.ಎಸ್. ಪ್ರದೀಪ್ ಅವರನ್ನು ಸಂಪರ್ಕಿಸಿದಾಗ, ಕುಮಾರಸ್ವಾಮಿ ಹೇಳಿಕೆಗಳು ಯಾವುದೇ ಪ್ರತಿಕ್ರಿಯೆ ನೀಡುವುದಕ್ಕೆ ಅರ್ಹವಾಗಿಲ್ಲ ಎಂದಿದ್ದಾರೆ.

## ಸಗಟು ಹಣದುಬ್ಬರ ಶೇ.2.03ಕ್ಕೆ ಏರಿಕೆ

ನವದೆಹಲಿ, ಫೆ. 15 - ಸಗಟು ಬೆಲೆ ಹಣದುಬ್ಬರ ಜನವರಿಯಲ್ಲಿ ಶೇ.2.03ರಷ್ಟು ತೀವ್ರ ಏರಿಕೆಯಾಗಿದೆ. ಆಹಾರೇತರ ಉತ್ಪನ್ನಗಳ ಬೆಲೆ ಹೆಚ್ಚಾಗಿರುವುದು ಇದಕ್ಕೆ ಕಾರಣವಾಗಿದೆ.

2020ರ ಡಿಸೆಂಬರ್‌ನಲ್ಲಿ ಸಗಟು ಹಣದುಬ್ಬರ ದರ ಶೇ.1.22ರಷ್ಟಿತ್ತು. ಕಳೆದ ವರ್ಷ ಜನವರಿಯಲ್ಲಿ ಶೇ.3.52ರಷ್ಟಿತ್ತು.

ಆಹಾರ ವಸ್ತುಗಳ ಹಣದುಬ್ಬರ ಇಳಿಕೆಯಾಗಿದೆ. ಆದರೆ, ಆಹಾರೇತರ ವಸ್ತುಗಳ ಬೆಲೆಗಳು, ಇಂಧನ ಹಾಗೂ ವಿದ್ಯುತ್ ಬೆಲೆಗಳು ಏರಿಕೆಯಾಗಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte